# ಗೋಕುಲವಾಣಿ

## Gokulavani

Vol : 33 Issue : 12 Mumbai December 2021 Pages : 72 Price 5/-



Visit us at : www.bskba.com Email : secretary@bskba.com

NANDAN Group

SINCE 1991

MAKE IN INDIA




Nandan presents
India's FIRST Smart
Rotary Car Parking System

**Comprehensive Solution**

- Ideal for Housing Societies, Malls, Industrial Estates, Govt. Car Parks, etc.
- Modular design
- Flexible configuration of 6-14 cars

**Low Cost, Low Maintenance**

- Simple Rotary Mechanism
- Parking attendant not needed
- Does not require other cars to be removed for retrieving a car

**Environment Friendly**

- Saves valuable open spaces
- Zero-emission operation

**Park upto 14 cars in the space of 2!**

To know more about Rotary Parking visit **www.rotaryparking.in**

Nandan GSE an ISO 9001:2015, manufacturer based in India and delivering worldwide since 26 years.

**AVIATION GSE | SPECIALITY HANDLING SOLUTIONS**
**CAR PARKING SOLUTIONS | AEROSPACE & DEFENSE SOLUTIONS**

+91 80802 73133 sales@nandan.co.in www.nandan.co.in D-205, MIDC Turbhe, Navi Mumbai 400705, INDIA

Advt.

# ಗೋಕುಲವಾಣಿ

## ಮಾಸ ಪತ್ರಿಕೆ


ಬಿ.ಎಸ್.ಕೆ.ಬಿ. ಎಸೋಸಿಯೇಶನ್, ಮುಂಬಯಿ : ಈ ಸಂಸ್ಥೆಯ ಮುಖ ಪತ್ರ

ಸಂಪುಟ : 33 ಡಿಸೆಂಬರ್ 2021 ಸಂಚಿಕೆ : 12



ಗೌರವ ಸಂಪಾದಕರು : ಡಾ। ವ್ಯಾಸರಾವ್ ನಿಂಜೂರ್

ಗೋಕುಲವಾಣಿ ಪ್ರಕಟಣಾಧ್ಯಕ್ಷರು : ಶ್ರೀ ಬಿ. ಉಮೇಶ್ ರಾವ್

ಸಲಹಾ ಮಂಡಳಿ :
ಶ್ರೀಮತಿ ಮಿತ್ರಾ ವೆಂಕಟ್ರಾಜ್, ಶ್ರೀಮತಿ ಅಹಲ್ಯಾ ಬಲ್ಲಾಳ, ಡಾ। ಜಿ. ಎನ್. ಉಪಾಧ್ಯ

ಸಂಪಾದಕ ಮಂಡಳಿ :
ಶ್ರೀ ಜಗದೀಶ್ ಆಚಾರ್ಯ, ಶ್ರೀಮತಿ ಪ್ರೇಮಾ ಎಸ್. ರಾವ್, ಡಾ। ಅರುಣ್ ರಾವ್
ಡಾ। ನಿತಿನ್ ರಾವ್, ಶ್ರೀ ಪಿ. ಸಿ. ಎನ್. ರಾವ್

ಪ್ರಕಾಶಕರು : ಶ್ರೀ ಎ.ಪಿ.ಕೆ. ಪೋತಿ

'ಗೋಕುಲವಾಣಿ' ಪ್ರತಿನಿಧಿಗಳು
ಮಂಗಳೂರು : ಶ್ರೀ ಪ್ರದೀಪ್‌ಕುಮಾರ್ ಕಲ್ಕೂರ ಉಡುಪಿ : ಶ್ರೀ ಎಚ್. ಶಾಂತರಾಜ ಐತಾಳ
ಬೆಂಗಳೂರು ಮತ್ತು ಉಡುಪಿ : ಶ್ರೀ ನಾರಾಯಣ ಬಲ್ಲಾಳ



ವಿನ್ಯಾಸ : ದೀಪಕ್ ಶೆಟ್ಟಿ (ನವೀನ್ ಪ್ರಿಂಟರ್ಸ್)
ಮುದ್ರಣ : ಸರಿತಾ ಆರ್ಟ್ ಪ್ರಿಂಟರ್ಸ್, ಮಾಟುಂಗ (ಪ), ಮುಂಬಯಿ - 400 016.



ಸಂಪರ್ಕ ವಿಳಾಸ : "ಗೋಕುಲವಾಣಿ" ಬಿ. ಎಸ್. ಕೆ. ಬಿ. ಎಸೋಸಿಯೇಶನ್,
ಪ್ಲಾಟ್ ನಂ. 273, ಗೋಕುಲ ಮಾರ್ಗ, ಸಯನ್ (ಪೂ),
ಮುಂಬಯಿ - 400 022. ದೂರವಾಣಿ : 2409 4061
Email : gokulavani@bskba.com


### ❖ ತಿಂಗಳ ತಿರುಳು ❖

ಆಸೆಗಳಿಗಾಗಿ ಬದುಕಬೇಡ,
ಆದರ್ಶಕ್ಕಾಗಿ ಬದುಕು.
ದೀರ್ಘವಾದ ಜೀವನ ಮುಖ್ಯವಲ್ಲ,
ದಿವ್ಯವಾದ ಜೀವನವೇ ಮುಖ್ಯ.

– ಕುವೆಂಪು

### ✳ ಮುಖ ಚಿತ್ರ ✳

**ಪ್ರಕೃತಿಗಾಗಿ ಪೊಡಮಡೋಣ**

| | |
|---|---|
| ಸಂಪಾದಕೀಯ - ಟೆಲಿಫೋನಿಗೆ ಸುಗಂಧ ಹಚ್ಚುವ ಎಲಿಝಬೆತ್ | 7 |
| From the Presidents Desk | 9 |
| Forthcoming Events of Gopalakrishna Public Trust | 13 |
| ಬ್ರಹ್ಮಕಲಶ ನಿಧಿ | 16 |
| ಭಗವದ್ಗೀತೆ ! ಏನಿದರ ಗಾಥೆ? | 27 |
| ಬಲ್ಲು ಹೇಳಿದ ಕತೆ | 31 |
| Youth Wing Activities for the month of November 2021 | 43 |
| Winners of Children's Day Competition | 45 |
| The Soulmate | 47 |
| Dr. Jayaprakash Hebbar - The Inextinguishible Prakash | 53 |
| Matrimonial | 54 |
| ಗೋಕುಲದ ಚಟುವಟಿಕೆಗಳು | 55 |
| Ashraya Activities | 57 |
| ಸುತ್ತ-ಮುತ್ತ | 59 |


"ಗೋಕುಲವಾಣಿ"ಯಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳು ಸಂಸ್ಥೆಯದು ಎಂದು ಪರಿಗಣಿಸಬಾರದಾಗಿ ವಿನಂತಿ - *ಸಂ.*

The views expressed by the contributors in this journal are theirs and not of the Association and the Association is not in anyway responsible for the same. *- Ed.*


## GOKUL REDEVELOPMENT
## & VARIOUS WORK IN PROGRESS












# Member Card & Membership Directory

Dear Member,

Namaskara.

We have been requesting you to update your details on https://mem.bskba.com for more than two years. As we plan to provide enhanced services to cardholders, we will be issuing the cards to coincide with the Gokul Inauguration and Brahmakalasha celebrations.




For the members who have uploaded their photos, the Card images, like the one shown here, will be sent to the **email-id registered by them.** Please ensure that the email-id registered by you is correct.

Cards will be printed for those members who reply to the mails they receive, confirming the correctness of the card image.

**Emails will be sent around 15th December 2021. Reply expected before 31st December 2021.**

Cards will be ready for dispatch by 15th January, 2022. Decision of whether to send by courier/post or distribute physically during Brahmakalasha is pending.

**Initial card will be issued free. Any corrections after the issue will be charged.**

**In case of any problem in uploading your details on mem.bskba.com, please contact PCN Rao -Mob: 9820599293 email: pcnrao16@yahoo.co.in**

**Please hurry up…if not done so far. Login to https://mem.bskba.com and upload your photo, correct your name, email, address etc.**

**Help us to serve you better.**

With warm Regards

APK Potty
Hon. Secretary
BSKB Association.

*ಸಂಪಾದಕೀಯ*

# ಟೆಲಿಫೋನಿಗೆ ಸುಗಂಧ ಹಚ್ಚುವ ಎಲಿಝಬೆತ್

ವೈವಿಧ್ಯಮಯ ವ್ಯಕ್ತಿತ್ವಗಳು ಹಾಗೂ ಬದುಕುಗಳು ನಮ್ಮನ್ನು ಸದಾ ಮಂತ್ರಮುಗ್ಧಗೊಳಿಸುತ್ತಿರುತ್ತವೆ. ನಮ್ಮ ವಠಾರದ ಇಗರ್ಜಿಯೆದುರಿನ ಕಟ್ಟಡದಲ್ಲಿ ಎಂಟಡಿ ಚದರಳತೆಯ ಮನೆಯಲ್ಲಿ ವಾಸಿಸುವ ಎಲಿಝಬೆತ್ತಿನ ವ್ಯಕ್ತಿತ್ವ-ಬದುಕು ಅಂಥದ್ದು. ನಮ್ಮ ಸುತ್ತಮುತ್ತ ಅವಳ ಪರಿಚಯವಿಲ್ಲದವರಿಲ್ಲ. ಎಲ್ಲರೂ ಅವಳನ್ನು ಮಾತನಾಡಿಸುವವರೇ.

ಟೆಲಿಫೋನುಗಳನ್ನು ಸ್ವಚ್ಛಗೊಳಿಸಿ, ಅವುಗಳೊಳಗೆ ಸುಗಂಧ ಸಿಂಪಡಿಸುವ ಕೆಲಸ ಅವಳದ್ದು. ಕಳೆದ ಐವತ್ತು ವರ್ಷಗಳಿಂದ, ಅಂದರೆ ಹದಿಮೂರು ವರ್ಷದ ಹುಡುಗಿಯಿದ್ದಾಗಿನಿಂದ ಮಾಡಿಕೊಂಡು ಬಂದ ಕೆಲಸವನ್ನು ಸರ್ವತ್ರ-ಮೊಬೈಲ್-ಯುಗ ಎಂಬ ಈ ಕಾಲದಲ್ಲಿ ಅರ್ಥ ಮಾಡಿಕೊಳ್ಳುವುದು ಕಷ್ಟ. ಆಫೀಸುಗಳಲ್ಲಿ ದಿನಾ ಬೆಳಿಗ್ಗೆ ದೇವರ ಪಟಕ್ಕೆ ಹೂ ಏರಿಸಿ, ಊದುಬತ್ತಿ ಹಚ್ಚಿ ಹೋಗುತ್ತಿದ್ದಂತೆ, ಅಮೂಲ್ಯವಾದ ಫೋನನ್ನು ಒರೆಸಿ, ಪರಿಮಳ ದ್ರವ್ಯ ಹಚ್ಚುವ ಆರೈಕೆಯೂ ನಡೆಯುತ್ತಿತ್ತು. ವಿ.ಟಿ.ಯಿಂದ ಮಸ್ಜಿದ್ ಬಂದರ್ ಅಲ್ಲಿಂದ ಖೇತ್ವಾಡಿ, ಭೂಲೇಶ್ವರ್ - ಹೀಗೆ ಎಲ್ಲ ಕಡೆಗೆ ನಡೆದುಕೊಂಡೇ ಹೋಗುತ್ತಿತ್ತು ಅವಳ ಸವಾರಿ. ಅಗಲ ಗೆರಸಿಯಂತಹ ಮುಖ, ಹಣೆಯಲ್ಲೊಂದು ಕೆಂಪು ಬಿಂದಿ. ಬೆಳಿಗ್ಗೆ ಮನೆಕೆಲಸ ಮುಗಿಸಿ, ಅಚ್ಚುಕಟ್ಟಾಗಿ ಪಿನ್ನು ಹಾಕಿ ಸೀರೆಯುಟ್ಟು, ಸೀರೆಯ ಬಣ್ಣದ ಹೂವನ್ನು ಕಿವಿಯ ಮೇಲೆ ಬರುವಂತೆ ಮುಡಿದು ರೈಲು ಹಿಡಿಯಲು ಹೊರಡುತ್ತಿದ್ದಳು. ಫೋನಿನ ಕೆಲಸ ಮುಗಿಸಿ ಬರುವಾಗ ಕ್ರಾಫರ್ಡ್ ಮಾರ್ಕೆಟಿನಿಂದ ನೆರೆಯವರು, ಪರಿಚಯದವರು ಹೇಳಿದರೆಂದು ಅವರವರಿಗೆ ಬೇಕಾದ ಸಾಮಾನು ಹೊತ್ತು ತರುವ ಕೆಲಸ ಬೇರೆ. ಯಾವುದೇ ಸಾಮಾನನ್ನು ನೀವು ಖರೀದಿಸಿ ತಂದರೂ, ಅದಕ್ಕಿಂತ ಕಡಿಮೆ ಬೆಲೆಗೆ ಇಂಥಲ್ಲಿ ಸಿಗುತ್ತದೆಂದು ಸಾರಿ ಅದನ್ನು ತಾನೇ ತರುವುದಾಗಿ ಮುಂದೆ ಬಂದು ಮೈಮೇಲೆ ಹಾಕಿಕೊಳ್ಳುವವಳು ಅವಳೇ. ಈಗಿನ ಭಾಷೆಯಲ್ಲಿ ಅವಳದು 'ವನ್ ವುಮನ್ ಸಪ್ಲೈ ಚೈನ್.'

ವರ್ಷಗಟ್ಟಲೆಯ ತಪಸ್ಸಿನಿಂದ ದೊರೆಯುತ್ತಿದ್ದ ಫೋನು ಬೇಕೆಂದವರಿಗೆ ಬೇಕಾದಾಗ ದೊರೆಯಲು ತೊಡಗುತ್ತಲೇ ಲೇಂಡ್‌ಲೈನಿನ ಪ್ರತಿಷ್ಠೆ ಕುಸಿಯಿತು. ಅದರೊಂದಿಗೆ ಫೋನನ್ನು ಉಪಚರಿಸಿ ಆರೈಸುವ ಕ್ರಮ ನಿಂತು ಹೋಗಿ ಈ ಕೆಲಸ ಮಾಡುತ್ತಿದ್ದ ಡೆಲಿಸಿಯಸ್ ಕಂಪೆನಿಯ ವ್ಯಾಪಾರವೂ ಕುಸಿಯಿತು. ಅದರ ಮಾಲಿಕ ಶಣ್ಮುಗಂ ಕಂಪೆನಿಯನ್ನು ಎಲಿಝಬೆತ್ತಿಗೆ ವಹಿಸಿಕೊಟ್ಟು ಬಿಟ್ಟ. ಆದರೆ ಬಡವಾಗಿ ಹೋದ ಬೇಡಿಕೆಗೆ ಓಗೊಟ್ಟು ಎಲಿಝಬೆತ್ ಎಷ್ಟು ಓಡಾಡಿಯಾಳು? ಫೋನ್ ಸೇವೆ ಬೇಡವಾಗಿದ್ದ ಆಫೀಸಿನವರು ಅವಳ ಬವಣೆ ನೋಡಲಾಗದೆ, 'ಬರುವ ಅಗತ್ಯವಿಲ್ಲ, ತಿಂಗಳು-ತಿಂಗಳು ಬಂದು ಹಣ ತೆಗೆದುಕೊಂಡು ಹೋಗು' ಎಂದರೂ, ಅವಳು ಕೇಳುವವಳೇ? ಅಲ್ಲಿ ಕೆಲಸ ಮಾಡುವ ಜನರ ಯೋಗಕ್ಷೇಮ ವಿಚಾರಿಸಿ ಅವರವರಿಗೆ ಬೇಕಾದ ಸಲಹೆ, ಸಹಾಯ ಮಾಡುವ ಅವಳ ಉಮೇದನ್ನು ಹತ್ತಿಕ್ಕಲಾದೀತೇ? ಬೆಳಿಗ್ಗೆ ಫೋನಿನ ಕೆಲಸವಾದರೆ, ಸಂಜೆ ಹೊತ್ತು ಮನೆಯ ಹತ್ತಿರದ ವೈದ್ಯೆಯೊಬ್ಬರ ಕ್ಲಿನಿಕ್ಕಿನಲ್ಲಿ, ಅವರ ಕೊನೆಗಾಲದ ವರೆಗೂ ಕಂಪೌಂಡರ್ ಕೆಲಸ ಮಾಡಿಕೊಂಡಿದ್ದಳು. ಮೂವತ್ತು ವರ್ಷಗಳ ಈ ಅನುಭವದಿಂದ ಸಾಧಾರಣ ಮಟ್ಟಿಗಿನ ಮದ್ದು-ಮಾತ್ರೆಗಳೆಲ್ಲ ಅವಳ ನಾಲಗೆ ತುದಿಯಲ್ಲೇ. ಪರಿಚಯದವರಿಗೆಲ್ಲ ಮದ್ದು-ಉಪಶಮನಗಳನ್ನು ಹೇಳಿಕೊಂಡೇ ಇರುತ್ತಿದ್ದಳು.

ತನ್ನ ಮನೆಯ ನೋವು-ಸಂಕಟಗಳನ್ನೆಲ್ಲ ಮೀರಿದ ಬದುಕು ಅವಳದು. ಗಂಡ ಜೋಸೆಫನಿಗೆ ಕುಡಿಯುವ ಚಟ. ಅವನನ್ನು ಕೆಲಸಕ್ಕೆ ಸೇರಿಸುವ ಪ್ರಯತ್ನಗಳೊಂದೂ ಫಲಿಸದೆ, ಯಾವಾಗಲೋ ಆ ವಿಚಾರದ ಕೈ ಬಿಟ್ಟಿದ್ದಳು. 2006ದ ಮಹಾಪೂರದಲ್ಲಿ ಮನೆಯೆದುರಿನ ನೀರಲ್ಲಿ ಆಡಿಕೊಂಡಿದ್ದ ಹತ್ತು ವರ್ಷದ ಮಗಳು ಲೆಪ್ಟೊಸ್ಪಿರೋಸಿಸ್ ಕಾಯಿಲೆಗೆ ಬಲಿಯಾಗಿದ್ದಳು. ಇನ್ನೊಬ್ಬ ಮಗಳು ಮದುವೆಯಾಗಿ ಗಂಡನ ಮನೆಯ ದೌರ್ಜನ್ಯಕ್ಕೊಳಗಾದಾಗ ಮನೆಗೆ ಕರೆತಂದು, ಇನ್ನೆಂದೂ ಮದುವೆ ಮಾಡೆನೆಂದು ಶಪಥಗೈದಿದ್ದಳು.

ಎಲಿಝುಬೆತ್ ಯಾರದೇ ಮನೆಗೆ ಬಂದಳೆಂದರೆ ಮನೆಯೆಲ್ಲೆಲ್ಲ ಲವಲವಿಕೆ ಹರಡುತ್ತಿತ್ತು. ನಾವು ಅವಳಿಗೆ ನೀರು ಕೊಡುವ ಮೊದಲೇ ಟ್ರೇಯಲ್ಲಿ ನೀರು ತಂದು ನಮಗೇ ಕೊಟ್ಟು, 'ಆಗಾಗ್ಗೆ ನೀರು ಕುಡಿಯುತ್ತಿರಬೇಕು,' ಎಂದಾಳು. 'ಚಾ-ಕಾಫಿ, ಏನು ಮಾಡಲಿ?' ಎಂದು ಉಪಚರಿಸಿಯಾಳು. ನಮ್ಮ ಬಂಧುಗಳದೆಲ್ಲ ಅವಳಿಗೆ ಆತ್ಮೀಯ ಪರಿಚಯ. ಮನೆಗೆ ಯಾರೇ ಬರಲಿ, ಅವಳು ಹಾಜರು. ಬಂದರೆ ಸುಮ್ಮನೆ ಕುಳಿತುಕೊಳ್ಳುವವಳೂ ಅಲ್ಲ. ಆತಿಥ್ಯದಲ್ಲಿ ಅವಳದು ಎತ್ತಿದ ಕೈ. ಜೊತೆಗೆ, ಸುಶ್ರಾವ್ಯ ಹಾಡಿನ ಮನರಂಜನೆಯನ್ನೂ ಒದಗಿಸಿಯಾಳು. ಒಂದೆರಡು ಹೆಜ್ಜೆ ನರ್ತಿಸಿದರೂ ನರ್ತಿಸಿದಳೇ. ಒಮ್ಮೆ ಆರ್ಕೆಸ್ಟ್ರಾದಲ್ಲಿ ವೇದಿಕೆಯ ಮೇಲೆ ಹಾಡುತ್ತಿದ್ದಾಗ ಅವಳ ಗಂಡನ ಅಣ್ಣ ವೇದಿಕೆಗೆ ಬಂದು ಅವಳ ಕೆನ್ನೆಗೆ ಬಾರಿಸಿದ್ದನಂತೆ. ಅದೇ ಕೊನೆ, ಮತ್ತೆ ಅವಳು ಹಾಡಲು ವೇದಿಕೆ ಹತ್ತಲಿಲ್ಲವೆಂದು ವಿಷಾದಪಡುತ್ತಿದ್ದಳಾದರೂ, ಸಂದರ್ಭಕ್ಕೆ ಸರಿಯಾದ ಹಿಂದಿ ಸಿನೆಮಾ ಹಾಡು ಹೇಳಿ ಎಲ್ಲರನ್ನೂ ನಗಿಸುವುದರಲ್ಲಿ ಅವಳಿಗೆ ಖುಶಿ. ಸೀರೆ ಉಡಿಸುವುದು, ಕೊನೆ ಕಾಲದಲ್ಲಿ ಹೆಣವನ್ನು ಸಿಂಗರಿಸುವುದು, ಮಕ್ಕಳನ್ನು ನೋಡಿಕೊಳ್ಳುವುದು, ಹಸೆ ಹಿಡಿದವರ ಆರೈಕೆ, ಶಾಪಿಂಗಿಗೆ ಜೊತೆ ಕೊಡುವುದು - ಹೀಗೆ ಅವಳು ಮಾಡದ ಕೆಲಸವಿರಲಿಲ್ಲ. ನಾಲ್ಕು ದಿನವಾದರೂ ಅಸೌಖ್ಯದಿಂದ ಮಲಗಬೇಕೆಂದರೆ ತನಗೊಂದು ಜ್ವರವೂ ಬರುತ್ತಿಲ್ಲವಲ್ಲ ಎಂದು ಪರಿತಪಿಸುತ್ತಿದ್ದ ಆಕೆ ಇದ್ದಕ್ಕಿದ್ದಂತೆ ಕಳೆದ ವಾರ ಮಧ್ಯಾಹ್ನ ಊಟ ಮುಗಿಸಿ ಟಿವಿ ನೋಡುತ್ತಿದ್ದವಳು ಎದೆ ನೋವು ಎನ್ನುತ್ತ ಮರುಕ್ಷಣ ಈ ಲೋಕವನ್ನೇ ತ್ಯಜಿಸಿದ್ದಳು. ಕೊರೊನಾ ದೆಸೆಯಿಂದ ಸಂಚಾರ ಸ್ಥಗಿತವಾಗಿ, ಜನ ಸಂಪರ್ಕದಲ್ಲಿ ದೊರೆಯುತ್ತಿದ್ದ ಸಂತೃಪ್ತಿ ಕೊನೆಗೊಂಡದ್ದೇ ದೈಹಿಕ-ಮಾನಸಿಕ ಆಘಾತಕ್ಕೆ ಕಾರಣವಾಯಿತೇ? 'ನಡುರಾತ್ರಿ ಬೇಕಾದರೂ ಕರಿಯಿರಿ, ನಾನು ಪ್ರತ್ಯಕ್ಷ,' ಎಂದು ಧೈರ್ಯ ಹೇಳುತ್ತಿದ್ದ ಅವಳ ಈ ರೀತಿಯ ಅನಿರೀಕ್ಷಿತ ನಿರ್ಗಮನಕ್ಕೆ ಮನಸ್ಸು ಇನ್ನೂ ಒಗ್ಗಿಕೊಳ್ಳುತ್ತಿಲ್ಲ. ಫಕ್ಕನೆ, 'ಆಯೆಗೀ ಆಯೆಗೀ, ಆಯೆಗೀ ಆನೇವಾಲೀ ಆಯೆಗೀ........' ಎಂದು ಹಾಡುತ್ತ ಒಳಗೆ ಬರಬಹುದೇನೋ ಎಂದನಿಸುತ್ತಿರುತ್ತದೆ.

ಮಿತ್ರಾ ವೆಂಕಟ್ರಾಜ್

## GENERAL INFORMATION

| Gokul | Ashraya |
|---|---|
| Flat No. 20, Sunil CHS, Plot No. 255, | Plot No. 92, Sector 19, |
| Sion (E), Mumbai - 400 022. | Nerul (E), Navi Mumbai - 400 706. |
| Phone : +91 8591732651 | Phone : +91 22 27700805 / +91 8591732653 |
| Email : gokul@bskba.com | Email : ashraya@bskba.com |

Website : www.bskba.com    Gokul Projects : www.gokulprojects.com

Email ids : secretary@bskba.com for mail to Hon. Secretary
gokulavani@bskba.com for all Gokulavani related matter
gpt@bskba.com for all matter related to GPT and Temple

Whatsapp & Mobile : +91 9869007308 (Hon. Secretary)

Facebook : http://www.facebook.com/gokulprojects

Twitter : @gokulprojects

UPI : bskba@kbl (with 80G)
gptmumbai@kbl (without 80G)

Donate to BSKBA

Donate to GPT

**Note :**

- All articles for Gokulavani must reach Gokul before 20th of every month.
- Feedback on Gokulavani articles may be sent to gokulavani@bskba.com

# From the Presidents Desk



## A REDEVELOPED GOKUL READY FOR LOKARPANE

Dear Members,

I have always believed that Gokul Redevelopment project is a noble and divine project. I am indeed blessed and fortunate to have been the chosen one to lead the team in this mammoth project.

Redevelopment with all the modern amenities and a future-ready ambience was imperative as during the last decade the purpose for which Gokul was constructed by our forefathers was not getting served. Our members preferred to perform functions elsewhere and the utilisation rate of our halls dipped to less than 20%.

When we started the project in 2017, we had only Rs 4 crores in our account. This was collected from His Holiness Sri Sri Pejawara Swamiji's 'Tulabhara' and two other fundraising events. At that time, the building redevelopment was expected to cost about Rs. 35 crores and the temple reconstruction about Rs. 3 crores.

However, this estimate did not include the costs of the elaborate temple carving works, a state-of-art auditorium, conference rooms and a few interior decoration projects due to fund constraints. In the initial days, we were even thinking of constructing a seven storied building in two phases as adequate funds were not available.

In the initial days of construction, the work got delayed by few months due to site related issues like restricted timings of work, basement work challenges due to presence of hard rock at places and softness of soil etc. and some compliance related approvals.

This delayed the project by about 4 months. However, work has never been delayed even for a single day due to lack of funds. There were days when there was no money in our account and our members were kind enough to help us by giving interest-free loan to enable us to continue the project uninterrupted.

As the construction work progressed, our members and well-wishers reposed faith and confidence in us by coming forward with generous donations.

Soon, thereafter, our journey gained momentum and the new emerging face of Gokul gave fillip to our confidence. In 2019, the core team decided to take up the project in a single phase, to avoid the future cost escalation impact.

We were planning for Brahmakalasha in June 2020. However, in March 2020, we had a major setback due to the COVID19 pandemic. As you all are aware, practically the entire world came to a standstill due to the imposition of lockdowns. We too had to abide by the rule of the land. Due to this, the construction work slowed down and our work got delayed by almost one year. This delay increased our construction cost by about Rs 3 crores.

Post March 2020, fund mobilization got severely hampered because of COVID19. Fund raising events were not possible due to COVID restrictions and there was financial stress all around. Even the work at site was affected due to non-availability of work force and imposition of COVID19 safety guidelines. Despite these challenges, we could continue the work by mobilizing nearly Rs. 75 lacs every month in the form of donations and interest free loans from our members. Until December 2020, we could resist taking the sanctioned Bank loan and avoid the resultant interest burden.

Collecting large donations was not possible during this period and hence we had to restrict to raising smaller donations like Gokula-Nidhi, naming of places in building by our members, 'Krishna Shile' contributions, donations in kind and naming of various murals of the Krishna Temple. Donations poured in during this period because of unstinted and sustained support of members and well-wishers.

As early as in 2018, we had started the planning of various stone and wooden carved murals, 'Dashavatara' idols in our proposed Temple. We had also planned for a state-of-art auditorium on the second floor. We also selected top quality materials for Gopura and the temple building. All this was done to make our Gokul one of the best temples in Mumbai. This is now almost ready for you to see.

Both due to delay in completion of project by 2 years and the cost of ensuring best quality finish products, the construction cost estimates went up from Rs. 38 crores to Rs. 52crores. Because of financial recession we may have to utilise 9 crores of bank loan. We are trying our best to mobilise the funds needed to bridge the gap.

The building is going to get completed in about 3 months. The building that is taking shape will present itself as an iconic structure and will be a true legacy for future generations. The new temple will be one of its kind in Mumbai and I am sure every devotee of Lord Shri Krishna will be proud of this.

I have no doubt that by God's grace we will also be able to meet our financial commitments.

The Gokul Redevelopment was a tough project because of a variety of reasons. But our members and well wishers supported us throughout all trials and tribulations.

I thoroughly enjoyed the excitement of this journey and seeing a dream come true. I would like to thank my core team, the Managing Committee members, and the members of BSKB Association for the support and for having reposed their faith in me.

My indefatigable core team comprising Shri Vaman Holla, Shri Haridas Bhat and Shri Anant Potty has worked untiringly to make this dream come true. I would like to thank them individually for their faith and belief in me and dedicating so much of their time for the Gokul project.

Yes, I am glad and proud to announce GOKUL REDEVELOPMENT is soon getting completed and it will ready for LOKARPANE in FEBRUARY 2022.

**Let us chant**
**OM ACHYUTAYANAMAHA...**
**OM ANATAYANAMAHA...**
**OM GOVINDAYANAMAHA...**

**Let us conclude here with the saying,**
**We are INDIANS By Spirit...**
**AND**
**GOKULITES By Heart !**

With warm regards,

**Dr. Suresh S. Rao**
President, BSKB Association

TECHNOTHERMA

Taking efficiency one step closer to perfection




STEEL PLANT FURNACES AND HEATING SYSTEMS

## TECHNOTHERMA FURNACES PRIVATE LIMITED

furnace@technotherma.net
www.technotherma.in
+91-22-2569 5555

2nd Floor, Hallmark Complex,
L.B.S. Marg, Mulund West.
Mumbai - 400 080. India.

MAXIMA®

SPECIALISTS IN

## SILICON AND NITRILE RUBBER PRODUCTS

## MAXIMA RUBBER INDUSTRIES

An ISO 9001 : 2015 CERTIFIED COMPANY.

CML:0007461980

IS:7499 LABORATORY SAFETY TESTED

ISO
ISO:9001:2015

Gala no.4, Blue Chip Industrial Estate no.4, Sativali Road,
Waliv, Vasai East - 401208.

maximarubber@yahoo.co.in | www.maximarubber.com
98676 36667, 98216 46259,

Advt.

# FORTHCOMING EVENTS OF GOPALAKRISHNA PUBLIC TRUST

## "SAMOOHIKA SRI SATYANARAYANA MAHA POOJA"

Samoohika Sri Satyanarayana Maha Pooja on the occasion of Makara Sankranti will be celebrated on Friday, the 14th January, 2022 from 5.00 p.m. onwards at Admar Mutt, Andheri (West).

The day's programme is as under :

| | | |
|---|---|---|
| 05.30 p.m. to 06.30 p.m. | : | Samoohika Sankalpa |
| 05.00 p.m. to 7.00 p.m. | : | Bhajans by Gokula Bhajana Mandali & Zonal Bhajana Mandalis |
| 07.15 p.m. | : | Mangalarathi followed by Theertha-Prasada & Prasada Bhojana. |

Members are requested to attend the above religious function.

| | | |
|---|---|---|
| **Dr. Suresh S. Rao** | **A.P.K. Potty** | **A. S. Rao** |
| Chairman | Hon. Secretary, BSKBA | Secretary-Trustee |

# Brahmakalasha Nidhi Donor`s List

A campaign for members to contribute towards the expenses for the planned Inauguration of Gokul and Brahmakalasha of our Temple has been started with Shri Mohanraj Bhat contributing the first donation.

Under this scheme, donor contributes a multiple (10/100/1000...) of their age (on their birthday) or number of their married life (on their wedding anniversary).

We are pleased to report that following donors have donated towards this fund.

In the month of November 2021

| S.No. | Name | Amount |
|---|---|---|
| 1 | Shri B. Ramanand Rao | 68,000 |
| 2 | Shri Jagdish Acharya | 65,000 |
| 3 | Smt. Vijayalaxmi S. Rao | 63,000 |
| 4 | Kum. Kanika Vishwanathan | 5,000 |
| 5 | Chetan Shetty | 5000 |
| 6 | P. Shrinivasa Tantri | 7300 |
| 7 | Nagaraj Pangal | 74000 |
| 8 | Dr. Suresh S. Rao | 68000 |
| 9 | Shri P. Rajesh Shiva Rao | 25000 |
| 10 | Smt. Srinidhi & Shri Natraj | 71,000 |
| 11 | Shri Laxmish Acharya | 72,000 |
| 12 | Shri K Subbanna Rao | 77,000 |
| 13 | Baby Misha | 5,000 |
| 14 | Shri T. Venkatesh Rao | 6000 |
| 15 | Shri Anantha Bhat | 25700 |
| 16 | Smt. Vijaylaxmi Rao | 38000 |

| | | |
|---|---|---|
| **Dr. Suresh S. Rao** | **A.P.K. Potty** | **A. S. Rao** |
| Chairman-Trustee | Hon. Secretary, BSKBA | Secretary-Trustee |

# ANNOUNCEMENT

Dear Members,

We need 8-10 VOLUNTEERS to look after the NEW GOKUL Building's day-to-day affairs. Those who are interested to do Social Work, kindly Contact the President, Dr. Suresh S. Rao or Shri A.P.K.Potty, Hon. Secretary at the earliest.

**Dr. Suresh S. Rao : 98200 25201 • A.P.K.Potty : 98923 61400**

**A.P.K.Potty**
Hon. Secretary

Dear Members,

We will be bringing out a souvenir on the ensuing Brahma Kalasha day on 6th February 2022 at Shanmukhananda Hall, Mumbai 400022. In this connection, some members have expressed that they wish to write their feelings/opinion about the Gokul project to be included in the Souvenir.

The Managing Committee has considered it favourably and accordingly invites them to contribute their articles. The same will be printed subject to editorial discretion, if necessary. The tariff will be the same as advertisements i.e. Rs.10,000/- per black and white, Rs.20,000/- per colour paper page, and Rs.40,000/- per colour page. Your articles with photos, if any, should reach us before 20th of January 2022. Hope, maximum members will take advantage of this Memorabilia which is a lifetime opportunity to be read and cherished by many generations for decades.

**Dr. Suresh S. Rao**
President

**A.P.K. Potty**
Hon. Secretary

## ಪ್ರಕಟಣೆ

ಪ್ರಿಯ ಸದಸ್ಯ ಬಾಂಧವರೇ,

ಗೋಕುಲ ದೇವಾಲಯದ ಮುಂಬರುವ ಬ್ರಹ್ಮಕಲಶೋತ್ಸವದ ಶುಭ ದಿನವಾದ 6, ಫೆಬ್ರವರಿ, 2022 ರಂದು, ಷಣ್ಮುಖಾನಂದ ಸಭಾಗೃಹದಲ್ಲಿ ಜರಗಲಿರುವ ಕಾರ್ಯಕ್ರಮದಲ್ಲಿ, ಒಂದು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡುವುದಾಗಿ ನಾವು ನಿಶ್ಚಯಿಸಿದ್ದೇವೆ. ಈ ಸ್ಮರಣಿಕೆಯಲ್ಲಿ ಗೋಕುಲದ ಹಾಗೂ ಗೋಕುಲದ ಯೋಜನೆಗಳ ಬಗ್ಗೆ ತಮ್ಮ **ಅನಿಸಿಕೆ – ಅನುಭವಗಳನ್ನು ಲೇಖನಗಳ ಮೂಲಕ** ಹಂಚಿಕೊಳ್ಳುವ ಅಭಿಪ್ರಾಯವನ್ನು ಕೆಲವು ಸದಸ್ಯರು ವ್ಯಕ್ತಪಡಿಸಿದ್ದಾರೆ. ಸದಸ್ಯರ ಈ ಮನವಿಯನ್ನು, ಕಾರ್ಯಕಾರೀ ಸಮಿತಿ ಪರಿಗಣಿಸಿ, ಲೇಖನಗಳನ್ನು ನೀಡಲು ಸದಸ್ಯರನ್ನು ವಿನಂತಿಸಿಕೊಳ್ಳುತ್ತಿದೆ. ಲೇಖನಗಳನ್ನು ಸಂಪಾದಕ ಮಂಡಳಿ ಪರೀಶೀಲನೆಯ ಮೇರೆಗೆ ಪ್ರಕಟಿಸುತ್ತೇವೆ.

ಲೇಖನಗಳನ್ನು ಪ್ರಕಟಿಸಲು ಜಾಹಿರಾತು ದರದಂತೆ ಹಣ ನಿಗದಿ ಮಾಡಲಾಗುವುದು. ಕಪ್ಪು-ಬಿಳುಪು ಪುಟಕ್ಕೆ ರೂ. 10,000/- ಬಣ್ಣದ ಕಾಗದ ಪುಟ ರೂ. 20,000/- ಮತ್ತು ಬಣ್ಣದ ಪುಟ 40,000/-. ತಮ್ಮ ಲೇಖನಗಳು, ಫೋಟೋಗಳು ಏನಾದರೂ ಇದ್ದರೆ ಅವುಗಳೊಂದಿಗೆ ಜನವರಿ 20,2022 ರ ಒಳಗೆ ನಮಗೆ ತಲುಪುವಂತೆ ಕಳುಹಿಸಿ ಕೊಡಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ. ಜೀವಮಾನದಲ್ಲಿ ಒಮ್ಮೆ ಒದಗುವ ಈ ಸದವಕಾಶದ ಪ್ರಯೋಜನವನ್ನು ಸದುಪಯೋಗಿಸಿಕೊಂಡು, ಹಲವು ದಶಕಗಳ ಕಾಲ ಮುಂದಿನ ಜನಾಂಗದವರು ಓದಿ ಆನಂದಿಸಬಹುದಾದ ತಮ್ಮ ಅನಿಸಿಕೆ, ಅನುಭವಗಳನ್ನು ತಮ್ಮ ಅಮೂಲ್ಯ ಲೇಖನಗಳ ಮೂಲಕ ಅತ್ಯಂತ ಹೆಚ್ಚಿನ ಸದಸ್ಯರು ಹಂಚಿಕೊಳ್ಳುವಿರೆಂದು ನಾವು ಆಶಿಸುತ್ತೇವೆ.

**ಡಾ. ಸುರೇಶ್ ಎಸ್. ರಾವ್**
ಅಧ್ಯಕ್ಷರು

**ಎ.ಪಿ.ಕೆ. ಪೋತಿ**
ಗೌ.ಕಾರ್ಯದರ್ಶಿ

# NAMING OPPORTUNITIES IN THE NEW GOKUL BUILDING

As you are aware the construction activity is going on in full swing for the new Gokul Building. As a part of the fund raising of the project we have received many donors interested in the naming opportunities in the new Gokul Building.

A lot of members have chosen their favourite options. The balance opportunities are as below .

| Amount (in Lakhs) | Asset |
|---|---|
| 50 | Terrace Garden |
| 20 each | Large Lifts (2) |

Proposed naming shall be strictly as per the guidelines as directed by the General Body. Offers not conforming to the same shall not be considered.

In case of multiple applications for the same naming the higher offer will be given preference. Opportunity will be given to all the applicants to revise their offer.

The donors who has already paid and committed to the Akshaya Nidhi donation will be given credit for the said payment while calculating the total amount towards naming. Multiple related donors who wish the naming in the memory of a single person of the extended family shall be allowed after clubbing of all such Donors.

Decision of the Managing Committee with respect to the successful offer in each of the above shall be final and binding.

**Dr. Suresh S. Rao**
President

**Haridas Bhat**
Hon. Treasurer

**A. P. K. Potty**
Hon. Secretary

NAVIN PRINTERS
SARITA ART PRINTERS
OFFSET • SCREEN • GRAPHIC DESIGNING
DESKTOP PUBLISHING IN : ENGLISH • HINDI • MARATHI • KANNADA
OFFICE : 13, Krishna Kunj, 143, S. B. Marg, Matunga (W. Rly.), Mumbai - 400016.
Tel. : 2431 1475 / 2437 0291 • Tel/Fax : 2430 8316 • E-mail : nvnprint@gmail.com
WORKS : G-12, Shalimar Industrial Estate, Matunga Labour Camp Rd., Matunga, Mumbai-19. ✆ 2409 7040
*Advt.*

# ಬ್ರಹ್ಮಕಲಶ ನಿಧಿ

ಪ್ರಿಯ ಸದಸ್ಯರೇ,

ನಮ್ಮ ಗೋಕುಲ ಪುನರ್ ನಿರ್ಮಾಣದಂತಹ ಬೃಹತ್ ಯೋಜನೆಯ ಸಾಹಸ ಗಾಥೆ ಜನವರಿ 2017 ರಲ್ಲಿ ಪ್ರಾರಂಭವಾಗಿತ್ತು. ಪ್ರಾರಂಭದಲ್ಲಿ ಈ ಯೋಜನೆಯ ವೆಚ್ಚ ಸುಮಾರು 35 ರಿಂದ 40 ಕೋಟಿ ರೂಪಾಯಿ ಆಗಬಹುದು ಎಂದು ಅಂದಾಜು ಮಾಡಲಾಗಿತ್ತು. ಕೋವಿಡ್ ಪಿಡುಗಿನಿಂದಾಗಿ ಯೋಜನೆ ವಿಳಂಬವಾಗಿ, ಖರ್ಚು ವೆಚ್ಚ ಅಧಿಕವಾಗಿ ಈಗ ಅದು 50 ಕೋಟಿ ರೂಪಾಯಿಯವರೆಗೆ ತಲುಪುತ್ತಾ ಬಂದಿದೆ. 35 ರಿಂದ 40 ಕೋಟಿ ವೆಚ್ಚವಾಗಬಹುದೆಂದು ಅಂದಾಜಿನಲ್ಲಿ ಪ್ರಾರಂಭಿಸಿದ ಸಮಯದಲ್ಲಿಯೇ ನಾವು ಅದನ್ನು ಎರಡು ಹಂತದಲ್ಲಿ ಮುಗಿಸುವುದೆಂದು ಯೋಚಿಸುತ್ತಿದ್ದೆವು. ಆದರೆ ಭಗವಂತನ ಅನುಗ್ರಹದಿಂದಾಗಿ ಈಗ ಒಂದೇ ಹಂತದಲ್ಲಿ ಮುಗಿಯುವುದರಲ್ಲಿದೆ. ಇದಕ್ಕಾಗಿ ಸಂದರ್ಭಕ್ಕನುಸಾರವಾಗಿ ಹಲವಾರು ನಿಧಿ ಸಂಗ್ರಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಯಿತು. ಸದ್ಯ ಕೋವಿಡ್-19 ಮಹಾಮಾರಿಯಿಂದಾಗಿ ನಿಧಿ ಸಂಗ್ರಹ ಕಾರ್ಯಕ್ರಮ ಕೂಡಾ ಸಾಧ್ಯವಿಲ್ಲವಾಗಿದೆ.

ಈ ವರ್ಷ ನಾವು ನಿಧಿ ಸಂಗ್ರಹಕ್ಕಾಗಿ **"ಬ್ರಹ್ಮಕಲಶ ನಿಧಿ"** ಎಂಬ ಒಂದು ಹೊಸ ಯೋಜನೆಯನ್ನು ಪ್ರಾರಂಭಿಸಿದ್ದೇವೆ. ಪ್ರತಿಯೊಬ್ಬರೂ ತಮ್ಮ ತಮ್ಮ ಜನ್ಮ ದಿನ, ವಿವಾಹ ವಾರ್ಷಿಕೋತ್ಸವದಂತಹ ಸಂಭ್ರಮದ ಕ್ಷಣಗಳಿಗಾಗಿ ಹಣವನ್ನು ವ್ಯಯಿಸುತ್ತಾರೆ. ಈ ಒಂದು ವರ್ಷ ಅಂತಹ ಸಂಭ್ರಮದ ದಿನಾಚರಣೆಯನ್ನು ಗೋಕುಲ ಪುನರ್ ನಿರ್ಮಾಣ ಹಾಗೂ ಬ್ರಹ್ಮಕಲಶ ನಿಧಿಗೆ ದೇಣಿಗೆ ನೀಡಿ ಸಂಭ್ರಮಿಸಬೇಕಾಗಿ ಕಳಕಳಿಯಿಂದ ವಿನಂತಿಸುತ್ತಿದ್ದೇವೆ. ನಾವು ಹಮ್ಮಿಕೊಂಡಿರುವ ಗೋಕುಲ ಪುನರ್ ನಿರ್ಮಾಣ ಯೋಜನೆ ಉದಾತ್ತ ಧ್ಯೇಯವನ್ನು ಹೊಂದಿದ್ದು, ಈ ದೈವಿಕ ಯೋಜನೆ ಸಮಾಜದ ಎಲ್ಲಾ ಸದಸ್ಯರಿಗೂ ಉಪಯೋಗವಾಗಲಿರುವುದು. ನಿಮ್ಮ ಜೀವನದ ವಿಶೇಷ ದಿನಗಳಲ್ಲಿ ಸಮಾಜಕ್ಕೆ ಯೋಗ್ಯವಾದ ಯೋಜನೆಗೆ ದೇಣಿಗೆ ನೀಡುವುದರಿಂದ ಶ್ರೀ ಗೋಪಾಲಕೃಷ್ಣನ ಅನುಗ್ರಹ ಖಂಡಿತಾ ದೊರಕುವುದು. **ಜನತಾ ಸೇವೆಯೇ ಜನಾರ್ದನ ಸೇವೆ ಎಂಬಂತೆ** ಸಮಾಜದ ಜನರ ಒಳಿತಿಗಾಗಿ ಮಾಡುವ ಸೇವೆಯಿಂದ ಉತ್ತಮವಾದ ಸೇವೆ ಬೇರೆ ಇಲ್ಲ.

ಗೋಕುಲ ಶ್ರೀ ಕೃಷ್ಣ ದೇವಸ್ಥಾನದ ಬ್ರಹ್ಮಕಲಶ ಮಹೋತ್ಸವವನ್ನು 2022 ಫೆಬ್ರವರಿಯಲ್ಲಿ ಮಾಡುವ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಅದು ಹತ್ತು ದಿನಗಳ ಕಾರ್ಯಕ್ರಮವಾಗಿರುವುದು, ಹಾಗಾಗಿ ಇದಕ್ಕೆ ಬೃಹತ್ ಮೊತ್ತದ ಅವಶ್ಯಕತೆ ಇದೆ. ಈ ಶತಮಾನದ ಅತ್ಯಂತ ಮಹತ್ವವೆನಿಸಿದ ಗೋಕುಲ ಉದ್ಘಾಟನಾ ಸಮಾರಂಭಕ್ಕೆ ತಾವೆಲ್ಲಾ ಮನಃಪೂರ್ವಕವಾಗಿ ತಮ್ಮ ಜನ್ಮ ದಿನ, ವಿವಾಹ ವಾರ್ಷಿಕೋತ್ಸವದ ದಿನ ಅಥವಾ ಮಕ್ಕಳ ಜನ್ಮದಿನಗಳಂತಹ ವಿಶೇಷ ಸಂದರ್ಭಗಳ ಸವಿ ನೆನಪಿನಲ್ಲಿ ತಮ್ಮ ಯಥಾಶಕ್ತಿ - ಉದಾಹರಣೆಗೆ. ತಮ್ಮ ಪ್ರಾಯ 55 ಎಂದು ಪರಿಗಣಿಸಿದರೆ 55 x 10 = 550/- ಅಥವಾ 55 x 100 = 5,500. ಅಥವಾ 55 x 1000 = 55,000/- ಹೀಗೆ ದೇಣಿಗೆಯನ್ನು ನೀಡಬೇಕಾಗಿ ವಿನಮ್ರತೆಯಿಂದ ವಿನಂತಿಸಿಕೊಳ್ಳುತ್ತಿದ್ದೇವೆ. ಈ ಯೋಜನೆಯು 2022 ರ ಬ್ರಹ್ಮಕಲಶ ಮಹೋತ್ಸವದ ವರೆಗೆ ಮುಂದುವರೆಯಲಿದೆ.

**ಬಿ.ಎಸ್.ಕೆ.ಬಿ. ಎಸೋಸಿಯೇಶನ್‌ಗೆ ನೀಡಿದ ಎಲ್ಲಾ ದೇಣಿಗೆಗಳು 80 G ಅನ್ವಯ ಆದಾಯಕರ ವಿನಾಯಿತಿಯನ್ನು ಪಡೆಯುತ್ತದೆ.**

**ದೇವರಿಗೆ, ದೇವಕಾರ್ಯಕ್ಕೆ ಸಮರ್ಪಿಸಿದ ಹಾಗೂ ದಾನ ಧರ್ಮಗಳಿಗೆ ನೀಡಿದ ದೇಣಿಗೆ ಅಕ್ಷಯವಾಗಿ ನಮಗೆ ಹಿಂತಿರುಗಿ ಬರುತ್ತದೆ ಎನ್ನುವ ಮಾತಿದೆ.** ಇದು ತಮ್ಮ ಅನುಭವಕ್ಕೂ ಬಂದಿರಬೇಕೆಂದು ನಾನು ಭಾವಿಸುತ್ತೇನೆ. ಈ ವರ್ಷ ನಾವೆಲ್ಲರೂ ನಮ್ಮ ಜೀವನದ ಮಧುರ ಕ್ಷಣಗಳನ್ನು **ಗೋಕುಲ ಬ್ರಹ್ಮಕಲಶ ನಿಧಿಗೆ** ದೇಣಿಗೆಯನ್ನು ನೀಡುವುದರೊಂದಿಗೆ ಸಂಭ್ರಮಿಸೋಣ.

**- ಡಾ. ಸುರೇಶ್ ಎಸ್. ರಾವ್**
**ಅಧ್ಯಕ್ಷರು–ಬಿ.ಎಸ್.ಕೆ.ಬಿ. ಎಸೋಸಿಯೇಶನ್**

॥ ಶ್ರೀ ಕೃಷ್ಣಾಯ ನಮ ಃ ॥ ॥ ಶ್ರೀ ಕೃಷ್ಣಂ ವಂದೇ ಜಗದ್ಗುರುಂ॥

# ಗೋಪಾಲಕೃಷ್ಣ ಪಬ್ಲಿಕ್ ಟ್ರಸ್ಟ್



Reg. No. E25308 (Mumbai)
"ಗೋಕುಲ", ಪ್ಲಾಟ್ ನಂ. 273, ಗೋಕುಲ ಮಾರ್ಗ, ಸಾಯನ್ (ಪೂ), ಮುಂಬಯಿ - 400 022.
ದೂರವಾಣಿ : +91 8591732651 • Email : gpt@bskba.com/secretary@bskba.com • Web : www.bskba.com

## ಸ್ವರ್ಣ – ರಜತ ತುಲಾಭಾರ

**ದಿನಾಂಕ 6-02-2022 ನೇ ರವಿವಾರ ಪೂರ್ವಾಹ್ನ 11-00 ಗಂಟೆಗೆ**

ಪ್ರಿಯ ಭಕ್ತ ಬಾಂಧವರೇ,

**ತುಲಾಭಾರ** ಎಂದ ಕೂಡಲೇ ನಮಗೆ ನೆನಪಾಗುವುದು ಶ್ರೀ ಕೃಷ್ಣ **ತುಲಾಭಾರ.** ಸತ್ಯಭಾಮಾದೇವಿ ತನ್ನ ಸಕಲ ಸಂಪತ್ತನ್ನು ತಂದು ಸುರಿದರೂ ತೂಗಲಾರದ ಶ್ರೀ ಕೃಷ್ಣನ ತಕ್ಕಡಿಯನ್ನು ರುಕ್ಮಿಣೀ ದೇವಿ ಶ್ರದ್ಧಾಭಕ್ತಿ ಸಮರ್ಪಣಾ ಭಾವದಿಂದ ಒಂದೇ ಒಂದು ತುಳಸೀ ದಳವನ್ನರ್ಪಿಸಿ ಶ್ರೀ ಕೃಷ್ಣನನ್ನು ತೂಗಿದಳು. ಶ್ರೀ ಕೃಷ್ಣನ ಒಲವಿಗೆ, ಕೃಪೆಗೆ ಪಾತ್ರಳಾದಳು. ತುಲಾಭಾರ ಸೇವೆ ಅತ್ಯಂತ ಪವಿತ್ರ ಸೇವೆ ಎನಿಸಿತು.

ಉಡುಪಿ ಕಡೆಗೋಲು ಕೃಷ್ಣ, ಜಗದ್ಗುರು ಶ್ರೀ ಮಧ್ವಾಚಾರ್ಯರು ಹಾಗೂ ಅಷ್ಟ ಮಠಗಳಿಗೆ ಪ್ರಸಿದ್ಧಿ, ಉಡುಪಿಯ ಶ್ರೀ ಕೃಷ್ಣ ಪೊಡವಿಗೊಡೆಯ, ಭಕ್ತ ವತ್ಸಲನಾಗಿ ಒಲಿದ ಕೃಷ್ಣ, ಮಮತಾಮಯಿ ಯಶೋದೆಯ ಮಾತೃ ಪ್ರೇಮಕ್ಕೆ ಸುಪ್ರೀತನಾಗಿ ಬ್ರಹ್ಮಾಂಡವನ್ನು ತೋರಿದ ಕೃಷ್ಣ, ಶ್ರೀ ಮಧ್ವ ಮುನಿ ಕರಾರ್ಚಿತ ಕೃಷ್ಣ. ಮುಂಬಯಿಯ ಗೋಕುಲದ ಗೋಪಾಲಕೃಷ್ಣನಿಗೂ ಉಡುಪಿಯ ಶ್ರೀ ಕೃಷ್ಣನಿಗೂ ಒಂದು ತೆರವಾದ ಅಗಾಧವಾದ ಅವಿನಾಭಾವ ಸಂಬಂಧ.

ತಾವೆಲ್ಲಾ ತಿಳಿದಂತೆ ಗೋಕುಲದ ಪುನರ್ ನಿರ್ಮಾಣ ಕಾರ್ಯದ ಧನ ಸಂಗ್ರಹಕ್ಕಾಗಿ ಹಲವಾರು ಯೋಜನೆಗಳನ್ನು, ತುಲಾಭಾರಗಳನ್ನು ನಾವು ಹಮ್ಮಿಕೊಂಡಿದ್ದೆವು. ಉಡುಪಿ ಪೇಜಾವರ ಮಠಾಧೀಶ ಹರಿ ಪಾದೈಕ್ಯ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ನಮ್ಮ ಮಹಾಪೋಷಕರೂ, ಮಾರ್ಗದರ್ಶಕರೂ ಆಗಿದ್ದರು. ಈ ಹಿಂದೆ ಎರಡು ಬಾರಿ ಪರಮಪೂಜ್ಯರು ಹಾಗೂ ಅವರ ಪಟ್ಟದ ದೇವರಿಗೆ ಸ್ವರ್ಣ-ರಜತ ತುಲಾಭಾರ ಸೇವೆ ಸಲ್ಲಿಸುವ ಸೌಭಾಗ್ಯ ನಮಗೆ ದೊರಕಿತ್ತು.

ಇದೀಗ ಶ್ರೀ ಕೃಷ್ಣನ ಅನುಗ್ರಹದಿಂದ ಮತ್ತೊಮ್ಮೆ ಅಂತಹ ಅವಕಾಶ ಒದಗಿ ಬಂದಿದೆ. ತನ್ನ ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅನೇಕ ಜನಪರ ಕಾರ್ಯಗಳನ್ನು ಕೈಗೊಂಡು ಜನಮನದಲ್ಲಿ ನೆಲೆಸಿರುವ, **ಉಡುಪಿ ಪಲಿಮಾರು ಮಠಾಧೀಶ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಸ್ವಾಮೀಜಿಯವರಿಗೆ ಅವರ ಪಟ್ಟದ ದೇವರು ಶ್ರೀ ಕೋದಂಡರಾಮ ಸಹಿತ ತುಲಾಭಾರ ಸೇವೆ** ಸಲ್ಲಿಸುವ ಸುವರ್ಣಾವಕಾಶ ನಮಗೆ ದೊರಕಿದೆ.

**ದಿನಾಂಕ 6 ಫೆಬ್ರುವರಿ 2022 ರವಿವಾರ, ಪೂರ್ವಾಹ್ನ 11.00 ಗಂಟೆಗೆ ಶ್ರೀ ಶ್ರೀ ವಿದ್ಯಾಧೀಶತೀರ್ಥ ಸ್ವಾಮೀಜಿ ಹಾಗೂ ಅವರ ಪಟ್ಟದ ದೇವರು ಶ್ರೀ ಕೋದಂಡರಾಮ (ಸೀತಾ ಲಕ್ಷ್ಮಣ ಸಹಿತ)** ದೇವರಿಗೆ **ಸ್ವರ್ಣ - ರಜತ ತುಲಾಭಾರ** ಸೇವೆ ಸಲ್ಲಿಸುವ ಸಂಕಲ್ಪವನ್ನು ಮಾಡಿದ್ದೇವೆ.

ಸದಸ್ಯ ಬಾಂಧವರು ಹಾಗೂ ಭಕ್ತಾದಿಗಳು ಈ ಪುಣ್ಯ ಕಾರ್ಯಕ್ಕೆ ತಮ್ಮಲ್ಲಿರುವ ಹಳೆಯ ಚಿನ್ನ-ಬೆಳ್ಳಿ ಅಥವಾ ನಗದು ಹಣವನ್ನು ನೀಡಿ ಸಹಕರಿಸಬೇಕೆಂದು ಕೋರುತ್ತೇವೆ. ತಮ್ಮ ದೇಣಿಗೆಯನ್ನು 5 ಫೆಬ್ರುವರಿ 2022 ರ ಒಳಗೆ ಗೋಕುಲ ಕಚೇರಿಗೆ ತಲುಪಿಸಿ, ರಸೀದಿಯನ್ನು ಪಡೆಯಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ಚೆಕ್ ಕೊಡಲಿಚ್ಛಿಸುವವರು **ಗೋಪಾಲಕೃಷ್ಣ ಪಬ್ಲಿಕ್ ಟ್ರಸ್ಟ್** ಹೆಸರಿನಲ್ಲಿ ನೀಡಬೇಕಾಗಿ ವಿನಂತಿ.

| ಸ್ವರ್ಣ - ರಜತ ತುಲಾಭಾರ ಸೇವೆಯ ವಿವರ | | | |
|---|---|---|---|
| ಬಂಗಾರ | | ಬೆಳ್ಳಿ | |
| ತೂಕ (ಗ್ರಾಂ) | ಮೌಲ್ಯ (ರೂ.) | ತೂಕ (ಗ್ರಾಂ) | ಮೌಲ್ಯ (ರೂ.) |
| 200 | 10,00,000/- | 10000 | 7,50,000/- |
| 100 | 5,00,000/- | 5000 | 3,75,000/- |
| 50 | 2,50,000/- | 2000 | 1,50,000/- |
| 25 | 1,25,000/- | 1000 | 75,000/- |
| 10 | 50,000/- | 500 | 37,500/- |
| 5 | 25,000/- | 100 | 7,500/- |
| 1 | 5,000/- | 50 | 3,750/- |

**ತಮ್ಮ ದೇಣಿಗೆಯನ್ನು ಗೋಪಾಲಕೃಷ್ಣ ಪಬ್ಲಿಕ್ ಟ್ರಸ್ಟ್‌ನ ಈ ಕೆಳಗಿನ ಖಾತೆಗೆ ನೇರವಾಗಿ ವರ್ಗಾವಣೆ ಕೂಡಾ ಮಾಡಬಹುದು.**

**For Indian Rupees from Indian Nationals only • *Transfers to this account are not eligible for 80G***
**Beneficiary : Gopalakrishna Public Trust • Bank : Karnataka Bank Ltd • Branch : Sion (E) •**
**Account type : Savings • Account No : 0852500101145701 • IFSC : KARB0000085**

ರಶೀದಿ ಪಡೆಯುವರೇ ವಹಿವಾಟು ವಿವರಗಳೊಂದಿಗೆ ದಯಮಾಡಿ secretary@bskba.com ಇದಕ್ಕೆ ಇಮೇಲ್ ಕಳುಹಿಸಿರಿ.

ಈ ತುಲಾಭಾರದಿಂದ ದೊರೆತ ಚಿನ್ನ ಹಾಗೂ ಬೆಳ್ಳಿಯನ್ನು ಶ್ರೀ ಕೃಷ್ಣ ಮಂದಿರ ಪುನರ್ ನಿರ್ಮಾಣ ನಿಧಿಗೆ ನೀಡಲು ಶ್ರೀ ಶ್ರೀಯವರು ಸಂತೋಷದಿಂದ ಒಪ್ಪಿಕೊಂಡಿದ್ದಾರೆ. ಈ ಅಭೂತಪೂರ್ವ ಕಾರ್ಯಕ್ರಮಕ್ಕೆ ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ತಂತಮ್ಮ ಶಕ್ತ್ಯಾನುಸಾರ ದೇಣಿಗೆಯನ್ನಿತ್ತು ತುಲಾಭಾರ ಸೇವೆಯಲ್ಲಿ ಪಾಲ್ಗೊಂಡು, ಶ್ರೀ ಕೃಷ್ಣಾನುಗ್ರಹ ಹಾಗೂ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರ ಆಶೀರ್ವಚನಕ್ಕೆ ಭಾಗಿಗಳಾಗಿ ಧನ್ಯರಾಗಬೇಕೆಂದು ನಮ್ರವಾಗಿ ವಿನಂತಿಸುತ್ತೇವೆ.

**ಡಾ. ಸುರೇಶ್ ಎಸ್. ರಾವ್**
**ಅಧ್ಯಕ್ಷರು - ವಿಶ್ವಸ್ಥ ಮಂಡಳಿ**

**ಎ. ಎಸ್. ರಾವ್**
**ಕಾರ್ಯದರ್ಶಿ - ವಿಶ್ವಸ್ಥ ಮಂಡಳಿ**

**ವಿಶ್ವಸ್ಥ ಮಂಡಳಿ : ಪೆರ್ಣಂಕಿಲ ಹರಿದಾಸ್ ಭಟ್, ಎ.ಪಿ.ಕೆ. ಪೋತಿ, ಕೃಷ್ಣ ಆಚಾರ್ಯ, ಬಿ. ಆರ್. ರಾವ್, ಎಸ್. ಎನ್. ಉಡುಪ**

II Sri Krishnaya Namaha II II Sri Krishnam Vande Jagadgurum II



# GOPALKRISHNA PUBLIC TRUST

**Reg. No. E25308 (Mumbai)**
"Gokul", Plot No. 273, Gokul Marg, Sion (East), Mumbai - 400 022 • Tel. : +91 8591732651
Email : gpt@bskba.com/secretary@bskba.com • Website : www.bskba.com

## "SWARNA - RAJATHA TULABHARA"

When we hear the word **"Tulabhara"** we are reminded of the incident in the life of Rukmini that reveals the extent to which humble devotion is worth more than material wealth. We, the members of Gokul have once again an opportunity to show and prove our love, devotion and spiritual maturity by participating in one such **"Tulabhara"**.

Udupi is known for Lord Krishna, Jagadguru Sri Madhwacharya and Ashtha Mathas. H.H. Sri Sri Sri Vishweshatheerta Swamiji of Pejawar mutt was the charioteer, like Lord Krishna was for Arjuna, to our GOKUL redevelopment project, leading, driving, advising and encouraging the members to dream big. We had the privilege of conducting Tulabhara Sevas to His Holiness along with his Pattada Devaru, earlier on two occasions.

Now, we have one more golden opportunity to do Tulabhara Seva to H.H.Sri Sri. Vidyadheeshateertha Swamiji of Palimaru Mutt. The revered Swamiji has undertaken innumerable social, religious and educational endeavours. We believe, with the blessings of Holy Swamijis nothing is impossible. The presiding Deity (Pattada Devaru) of Sri Palimaru Mutt **"SRI KODANDA RAMA"** worshipped by the Swamiji has a legacy of being bequeathed from Sri Madhwacharya.

**On 6th February 2022, Sunday at 11.00 a.m.,** we have decided to perform **"TULABHARA "** of **Sri Sri Swamiji of Palimaru Mutt and his pattada devaru - SRI KODANDARAMA (Seetha Lakshmana sahita)** in gold and silver. It's indeed a golden opportunity for all of us to witness such a great event in Gokul.

We appeal to all the members and devotees of Lord Krishna to contribute by giving old gold ornaments and silver articles or donate in cash towards the Tulabhara and obtain the receipt from office on or before 5th February 2022. Cheques may be drawn in favour of **GOPALAKRISHNA PUBLIC TRUST.**

**DETAILS OF DONATION OPTIONS "SWARNA - RAJATHA TULABHARA" SEVAS :**

| Gold | | Silver | |
|---|---|---|---|
| Weight (gms) | Value (Rs.) | Weight (gms) | Value (Rs.) |
| 200 | 10,00,000/- | 10000 | 7,50,000/- |
| 100 | 5,00,000/- | 5000 | 3,75,000/- |
| 50 | 2,50,000/- | 2000 | 1,50,000/- |
| 25 | 1,25,000/- | 1000 | 75,000/- |
| 10 | 50,000/- | 500 | 37,500/- |
| 5 | 25,000/- | 100 | 7,500/- |
| 1 | 5,000/- | 50 | 3,750/- |

You can also transfer the amount to **Gopalakrishna Public Trust,** the account details of which are given below :

**For Indian Rupees from Indian Nationals only • *Transfers to this account are not eligible for 80G***
**Beneficiary : Gopalakrishna Public Trust • Bank : Karnataka Bank Ltd. • Branch : Sion (E)**
**Account type : Savings • Account No : 0852500101145701 • IFSC : KARB0000085**

Please send email to secretary@bskba.com with the transaction details to get receipt.

The Swamiji has been very gracious in donating the entire proceeds of the Tulabhara towards the Gokul Temple Re-development. We therefore appeal to each and every member of Gokul and all the devotees of Lord Krishna to partake in this unique event and contribute their might towards Gokul Temple Redevelopment fund through this rarest of rare opportunity and be recipient of blessings of our Temple Deity Bhagwan Sri Krishna and H.H. Sri Sri Vidyadheeshatheerta Swamiji of Palimaru Mutt.

**Dr. Suresh Rao**
**Chairman-Trustee**

**A. S. Rao**
**Secretary-Trustee**

**Trustees : Pernankila Haridasa Bhat, APK Potty, Krishna Acharya, B. R. Rao, S. N. Udupa**

# ಗೋಪಾಲಕೃಷ್ಣ ಪಬ್ಲಿಕ್ ಟ್ರಸ್ಟ್

## ಆಗಮೋಕ್ತ ದೇವತಾ ಕಾರ್ಯಕ್ರಮ – ಬ್ರಹ್ಮಕಲಶ ಧಾರ್ಮಿಕ ವಿಧಿಗಳು
## 29.1.2022 ರಿಂದ 7.2.2022

| | |
|---|---|
| **ಗೋಕುಲದಲ್ಲಿ – 29.1.2022 ಶನಿವಾರ ಸಾಯಂಕಾಲ ಘಂಟೆ 6.00 ರಿಂದ** | ದೇವತಾ ಪ್ರಾರ್ಥನೆ, ಸ್ವಸ್ತಿ ಪುಣ್ಯಾಹ ವಾಚನ, ಸಪ್ತ ಶುದ್ಧಿ ರಾಕ್ಷೋಘ್ನ ಹೋಮ, ವಾಸ್ತುಹೋಮ, ವಾಸ್ತುಪೂಜೆ, ವಾಸ್ತುಬಲಿ, ಪ್ರಾಕಾರ ಬಲಿ, ದ್ವಾರ ಪೂಜೆ 7.45 p.m. (ಸಿಂಹ ಲಗ್ನ) ಪ್ರವೇಶ. |
| **ಗೋಕುಲದಲ್ಲಿ – 30.01.2022 ರವಿವಾರ ಪ್ರಾತಃಕಾಲ ಘಂಟೆ 7 ರಿಂದ 9.30** | ಗಣಯಾಗ, ಶ್ರೀ ಸತ್ಯನಾರಾಯಣ ವ್ರತ, ಪ್ರಸಾದ ವಿತರಣೆ. |
| **ಆಶ್ರಯ ಬಾಲಾಲಯ – 30.01.2022 ರವಿವಾರ ಪ್ರಾತಃಕಾಲ 10.30 ರಿಂದ 12.30** | ದೇವತಾ ಪ್ರಾರ್ಥನೆ, ಸ್ವಸ್ತಿಪುಣ್ಯಾಹವಾಚನ, ಬಿಂಬಚರಕಲಶ ಸಹಿತ ತತ್ವಹೋಮ, ಮಹಾಪೂಜೆ. ಅದೇ ದಿನ ಅಪರಾಹ್ನ ಘಂಟೆ 12.30 ಕ್ಕೆ ಒದಗುವ ಮೇಷ ಲಗ್ನ ಸುಮುಹೂರ್ತದಲ್ಲಿ ಬಿಂಬ ಚಲನಾ ಪೂರ್ವಕ ಬಾಲಾಲಯದಿಂದ 2.30 ಕ್ಕೆ ಹೊರಟು ಮೂಲ ಆಲಯಕ್ಕೆ (ಗೋಕುಲ ಕೃಷ್ಣ ಮಂದಿರಕ್ಕೆ) 3.30 ಕ್ಕೆ ಹನುಮಾನ್ ಮಂದಿರಕ್ಕೆ ಆಗಮಿಸುವುದು. ಸಾಯಂ. 4 ಘಂಟೆಯಿಂದ ಮೆರವಣಿಗೆ ಸಾಯಂಕಾಲ 5.30 ಕ್ಕೆ ಗೋಕುಲ ಪ್ರವೇಶ, ಆಲಯ ಪರಿಗ್ರಹ. |
| **31.1.2022 ನೇ ಸೋಮವಾರ ಪ್ರಾತಃಕಾಲ ಘಂಟೆ 8.00 ರಿಂದ**<br><br>**ಸಾಯಂಕಾಲ ಘಂಟೆ 5.00 ರಿಂದ** | ದೇವತಾ ಪ್ರಾರ್ಥನೆ, ತೋರಣ ಮುಹೂರ್ತ, ಉಗ್ರಾಣ ಮುಹೂರ್ತ, ಆಚಾರ್ಯಾದಿ ಋತ್ವಿಗ್ವಹಣ, ಮಹಾ ಸಂಕಲ್ಪ, ಪುಣ್ಯಾಹವಾಚನ, ಅರಣಿ ಮಥನ, ಭದ್ರದೀಪ ಪ್ರತಿಷ್ಠೆ, ಬ್ರಹ್ಮ ಕೂರ್ಚ ಹೋಮ, ದೇವನಾಂದಿ, ಕಂಕಣ ಬಂಧ, ಗಣಪತಿ ಅಥರ್ವಶೀರ್ಷಯಾಗ, ಮಹಾಪೂಜೆ.<br>ಪಂಚಗವ್ಯ ಮೇಲನ, ಸಪ್ತಶುದ್ಧಿ, ಪ್ರಾಸಾದಶುದ್ಧಿ, ಅಂಕುರಾರ್ಪಣೆ, ಅಸ್ತ್ರಕಲಶಪ್ರತಿಷ್ಠೆ, ರಾಕ್ಷೋಘ್ನಹೋಮ, ವಾಸ್ತುಪೂಜೆ, ವಾಸ್ತುಹೋಮ, ವಾಸ್ತುಬಲಿ, ಪ್ರಾಕಾರಬಲಿ, ಮಹಾಪೂಜೆ. |
| **1.2.2022 ನೇ ಮಂಗಳವಾರ ಪ್ರಾತಃಕಾಲ ಘಂಟೆ 8.00 ರಿಂದ**<br>**ಸಾಯಂಕಾಲ ಸಮಯ 5.00 ರಿಂದ** | ಪುಣ್ಯಾಹವಾಚನ, ಗಣಯಾಗ, ಪೂರ್ಣನವಗ್ರಹಶಾಂತಿ, ಅಷ್ಟಾಕ್ಷರಮಂತ್ರ ಹೋಮ, ಮಹಾಪೂಜೆ,<br>ದುರ್ಗಾನಮಸ್ಕಾರಪೂಜೆ, ಅಸ್ತ್ರಮಂತ್ರ ಹೋಮ, ಅಂಕುರಪೂಜೆ, ಮಹಾಪೂಜೆ. |
| **2.2.2022 ನೇ ಬುಧವಾರ ಪ್ರಾತಃಕಾಲ ಘಂಟೆ 8.00 ರಿಂದ**<br><br>**ಸಾಯಂಕಾಲ 5.00 ರಿಂದ** | ಸ್ವಸ್ತಿಪುಣ್ಯಾಹವಾಚನ, ಗಣಯಾಗ, ಸಂಜೀವಿನಿ ಮಹಾಮೃತ್ಯುಂಜಯ ಹೋಮ, ಬಿಂಬಶುದ್ಧಿ ಪ್ರಕ್ರಿಯೆಗಳು, ಅಕ್ಷತೆ ಹೋಮ. ಮಹಾ ಪೂಜೆ.<br>ಶಕ್ತಿ ಹೋಮ, ರತ್ನನ್ಯಾಸಾದಿ ಹೋಮಗಳು, ಧಾನ್ಯಾಧಿವಾಸ ಪ್ರಕ್ರಿಯೆಗಳು, ಚಕ್ರಾಬ್ಜ ಮಂಡಲಪೂಜೆ, ಗೋಪೂಜೆ, ಗೋದೋಹನ, ಶಿರಸತ್ವ ಹೋಮ, ಅಧಿವಾಸ ಹೋಮಗಳು... |

| | |
|---|---|
| **3.2.2022 ನೇ ಗುರುವಾರ**<br>**ಪ್ರಾತಃಕಾಲ 6.00 ರಿಂದ** | ಪುಣ್ಯಾಹವಾಚನ, ಗಣಯಾಗ, ಅಷ್ಟಮಂಗಲದರ್ಶನ, ವಿದ್ಯೇಶಾದಿ ಕಲಶಾಭಿಷೇಕ, ಶಿಖರ ಪ್ರತಿಷ್ಠೆ<br>**ಪ್ರಾತಃ ಕಾಲ ಸಮಯ 8.32 ಕ್ಕೆ ಒದಗುವ ಕುಂಭ ಲಗ್ನ ಸುಮುಹೂರ್ತದಲ್ಲಿ ಶ್ರೀ ಕೃಷ್ಣ ದೇವರ ಬಿಂಬ ಪ್ರತಿಷ್ಠೆ,** ಅಷ್ಟಬಂಧ ಲೇಪನ, ನಿದ್ರಾ ಕುಂಭಾಭಿಷೇಕ, ನಿತ್ಯನೈಮಿತ್ತಿಕ ನಿರ್ಣಯ, ಶಿಲ್ಪಿ ಮರ್ಯಾದೆ, ಮಹಾಪೂಜೆ. |
| **ಸಾಯಂಕಾಲ ಘಂಟೆ 5.00 ರಿಂದ** | ನಾಗತನುತರ್ಪಣ, ಪ್ರಸನ್ನ ಪೂಜೆ, ಅಂಕುರ ಪೂಜೆ, ಮಹಾ ಪೂಜೆ. |
| **4.2.2022 ನೇ ಶುಕ್ರವಾರ**<br>**ಪ್ರಾತಃಕಾಲ ಘಂಟೆ 8.00 ರಿಂದ** | ಪುಣ್ಯಾಹ ವಾಚನ, ಗಣಯಾಗ, ಪ್ರಾಯಶ್ಚಿತ್ತ ಹೋಮಗಳು, ತತ್ವಹೋಮ, ತತ್ವಕಲಶಾಭಿಷೇಕ, ತತ್ವನ್ಯಾಸಪೂಜೆ, ನವೀಕೃತಗೋಪುರಸಮರ್ಪಣೆ, ಶಿಖರಪ್ರತಿಷ್ಠೆ ಕಲಶಾಭಿಷೇಕ, ಚಂಡಿಕಾಯಾಗ, ಮಹಾಪೂಜೆ. |
| **ಸಾಯಂಕಾಲ ಘಂಟೆ 5.00 ರಿಂದ** | ಮಹಾ ಸುದರ್ಶನ ಹೋಮ, ಸಾನ್ನಿಧ್ಯ ಸಂಯೋಜನೆ, ಅಂಕುರಪೂಜೆ, ದಿಕ್ಪಾಲಕ ಹೋಮಗಳು, ಮಹಾಪೂಜೆ. |
| **ಸಾಯಂಕಾಲ ಘಂಟೆ 5.00 ರಿಂದ** | **ಶ್ರೀನಿವಾಸ ಕಲ್ಯಾಣೋತ್ಸವ** |
| **5.2.2022 ನೇ ಶನಿವಾರ**<br>**ಪ್ರಾತಃ ಕಾಲ ಘಂಟೆ 8.00 ರಿಂದ**<br>**ಸಾಯಂಕಾಲ ಘಂಟೆ 5.00 ರಿಂದ** | ಪುಣ್ಯಾಹವಾಚನ, ಗಣಯಾಗ, ಶ್ರೀಕೃಷ್ಣ ಮಂತ್ರ ಹೋಮ, ಮಂಟಪ ನಮಸ್ಕಾರ, ಶಾಂತಿ ಪ್ರಾಯಶ್ಚಿತ್ತ ಹೋಮಗಳು, ಮಹಾಪೂಜೆ.<br>ಮಂಡಲಪೂಜೆ, ಪಂಚವಿಂಶತಿದ್ರವ್ಯಮಿಳಿತ ಸಹಸ್ರ ಪರಿಕಲಶಸಹಿತ ಬ್ರಹ್ಮಕಲಶಾಧಿವಾಸ, ಅಧಿವಾಸ ಹೋಮಗಳು, ಅಂಕುರಪೂಜೆ, ಮಹಾಪೂಜೆ |
| **6.2.2022 ನೇ ರವಿವಾರ**<br>**ಪ್ರಾತಃ ಕಾಲ ಘಂಟೆ 7.00 ರಿಂದ** | ಪುಣ್ಯಾಹವಾಚನ, ಗಣಹೋಮ, ಸಹಸ್ರಕಲಶ ಸಹಿತ **ಶ್ರೀ ಕೃಷ್ಣ ದೇವರಿಗೆ (1008) ಬ್ರಹ್ಮಕಲಶಾಭಿಷೇಕ ಆರಂಭ ಹಾಗೂ ಸಮಯ 9.28 ಕ್ಕೆ ಒದಗುವ ಮೀನ ಲಗ್ನ ಸುಮುಹೂರ್ತದಲ್ಲಿ ಬ್ರಹ್ಮ ಕಲಶಾಭಿಷೇಕ ಸಮರ್ಪಣೆ,** ಮಹಾಪೂಜೆ, ಪಲ್ಲಪೂಜೆ, ಅನ್ನಸಂತರ್ಪಣೆ. |
| **ಪ್ರಾತಃ ಕಾಲ ಘಂಟೆ 11.00 ರಿಂದ** | **ಉಡುಪಿ ಪಲಿಮಾರು ಮಠಾಧೀಶ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು ಹಾಗೂ ಅವರ ಪಟ್ಟದ ದೇವರು ಶ್ರೀ ಕೋದಂಡರಾಮ ದೇವರಿಗೆ ಸ್ವರ್ಣ ರಜತ ತುಲಾಭಾರ ಸೇವೆ** |
| **ಸಾಯಂಕಾಲ ಸಮಯ 5.00 ರಿಂದ** | ಷಡಧ್ವನ್ಯಾಸಪೂಜೆ, ರಂಗಪೂಜೆ, ಶ್ರೀ ದೇವರ ಬಲಿಹೊರಟು ಮಹೋತ್ಸವ. |
| **7.2.2022 ಸೋಮವಾರ**<br>**ಪ್ರಾತಃಕಾಲ ಘಂಟೆ 8.00 ರಿಂದ** | ಪುಣ್ಯಾಹವಾಚನ, ಮಂಗಲಗಣಯಾಗ, ಸಂಪ್ರೋಕ್ಷಣೆ, ಮಹಾಪೂಜೆ, ಮಹಾಮಂತ್ರಾಕ್ಷತೆ. |

**ವಿ. ಸೂ. : ದಿನಾಂಕ 31.1.2022 ಸೋಮವಾರದಿಂದ ದಿನಾಂಕ 6.2.2022 ರವಿವಾರದವರೆಗೆ ಪ್ರತಿದಿನ ಬೆಳಿಗ್ಗೆ 9.00 ರಿಂದ ರಾತ್ರಿ 9.00 ರವರೆಗೆ ಹರಿನಾಮ ಸಂಕೀರ್ತನೆ ಸಹಿತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಲಿರುವವು. ಕಾರ್ಯಕ್ರಮಗಳ ವಿವರಗಳನ್ನು ಮುಂಬರುವ ಗೋಕುಲವಾಣಿಯಲ್ಲಿ ನೀಡಲಾಗುವುದು.**

**ಶ್ರೀ ಕೃಷ್ಣಾರ್ಪಣಮಸ್ತು.**


KALASHA SEVA during BRAHMAKALASHABHISEKHA
of GOKULA GOPALAKRISHNA TEMPLE, Sion, Mumbai
On 6th February, 2022

**: Om Shree Krishnaya Tubhyam Namah :**
**II Kalashavembuvudu devateya prateekavu II**



**Saagare Mathyamaane tu Peeyushaartham Suraasurai I**
**Peeyushadhaaranaarthaaya nirmito Vishwakarmanaa II**
**Kalaah Kalaastu Devaanaamapi Tasthaah prathak prathak I**
**yatah krutaastu kalasaasta taste parikeertitaah II**

When the Gods & Demons vigorously churned the milky ocean, nectar emerged; Vishwakarma compiled the different magnificent virtues of all devas to construct a container that has capacity to hold this sacred elixir of life. This is famously called the "Kalasha".

Laxmi Devi represents opulence, creativity, wealth, beauty, and power. Kalasha is considered her abode with all her virtues contained in it. In this auspicious vessel all valuable wisdom and art are present.

To be physically healthy, wealthy, radiant, intellectually vibrant and to benefit from all opulence one invokes hundreds of divine aspects of God with utmost devotion and grace into the vessel as a reflection of all auspiciousness, and this is called Kalasharadhana.

God created water and anointed himself and created Fire to light a lamp for himself. Both have become inseparable part of our lives and prayers. The water filled in the vessel and prayed with devotion to the almighty attracts many positive aspects to increase the spiritual value of the water, and the Idols get energized. Thus, the water that flows down is sacred water that can bestow these qualities to others.

Even after the Kalasabhishekam the vessels retain this powerful residual energy. So, they are a form of "prasaada" that should be worshipped again and again, and their spiritual power grows. These vessels, over time, are some of the most potent tools that can uplift entire families of devotees.

While doing Kalasharadhana one has to imagine and invoke *Mahaavishnu* at the top of the Kalasha, *Maharudra* at the neck, *Chaturmukha Brahma* at the base, *Matrukas* in the middle and the bulging mid-portion should be imagined as containing all the oceans, continents, earth, and the essence of Rig-Veda, Yajur-Veda, Sama-Veda and Atharva-Veda.

**Kalasha keertimaayushyam prajnaam, medhaam, shreeyam, balam I**
**Yogyataam, paapahaanim cha punya vruddhim cha saadhayet II**

Shasthras affirm that by doing Kalasharadhana, one earns stability, fame, longevity, intelligence, wisdom, benevolence, and power. All undesirable aspects are eradicated, and God's benevolence is assured. Therefore, this act of Kalashaaradhane is a must for all devotees.

**Dear Devotees,**
**The Brahmakalashabhisekha of our Lord Sri Gopalkrishna will be held on 6th February 2022.**

We invite you to participate in this great festivity and receive the prasadam of Shree Kalasha and be blessed by His infinite grace.

| | | |
|---|---|---|
| **A. P. K. Potty** | **Dr. Suresh Rao** | **A. S. RAO** |
| Hon. Secretary | President | Secretary-Trustee |

: ಓಂ ಶ್ರೀ ಕೃಷ್ಣಾಯ ತುಭ್ಯಮ್ ನಮಃ :

|| ಕಲಶವೆಂಬುವುದು ದೇವತೆಯ ಪ್ರತೀಕವು ||



ಸಾಗರೇ ಮಥ್ಯಮಾನೇ ತು ಪೀಯೂಷಾರ್ಥಂ ಸುರಾಸುರೈ: |
ಪೀಯೂಷಧಾರಣಾರ್ಥಾಯ ನಿರ್ಮಿತೋ ವಿಶ್ವಕರ್ಮಣಾ ||
ಕಲಾ:ಕಲಾಸ್ತು ದೇವಾನಾಮಪಿ ತಾಸ್ತಾ: ಪೃಥಕ್ ಪೃಥಕ್ |
ಯತ: ಕೃತಾಸ್ತು ಕಲಸಾಸ್ತತಸ್ತೇ ಪರಿಕೀರ್ತಿತಾ: ||

ಕ್ಷೀರಸಾಗರದಲ್ಲಿ ಅಮೃತಕ್ಕಾಗಿ ದೇವದಾನವರಿಂದ ಕಡೆಯಲ್ಪಡಲು, ಅಲ್ಲಿ ಉತ್ಪತ್ತಿಯಾದ ಸುಧಾರಸದ ಹಿಡಿದಿಡುವಿಕೆಗಾಗಿ ಹೊರಸೂಸಲ್ಪಟ್ಟ ದೇವತೆಗಳ ಬೇರೆ ಬೇರೆ ಚೈತನ್ಯಗಳು ವಿಶ್ವಕರ್ಮನಿಂದ ಸ್ವರೂಪ ತಾಳಿ "ಕಲಸಾ:" [ಕಲಶಾ:] ಎಂದು ಕರೆಯಲ್ಪಟ್ಟವು.

ಕಂ ಲಾತಿ ಇತಿ ಕಲಾ. ಕ ಅಂದರೆ ಲಕ್ಷ್ಮೀ. ಅವಳು ಸಂಪತ್ತಿಗೆ ಅಭಿಮಾನೀ ದೇವತೆ. ಅವಳನ್ನು ಲಾತಿ ಅಂದರೆ ತರುತ್ತದೆ ಎನ್ನುವುದರಿಂದ ಅದು ಕಲೆ. ಸಂಪತ್ತು ಅನುಗ್ರಹರೂಪವಾದದ್ದು. ಕಲಾಃ ಅಸ್ಮಿನ್ ಶೇರತೇ ಇತಿ ಕಲಶಃ. ಅಂದರೆ ಸಂಪದಭಿಮಾನೀದೇವತೆಗಳನ್ನು ಕರೆತರುವ ಪರಿಕರಗಳು ಯಾವುದರಲ್ಲಿ ಮಲಗಿರುತ್ತವೆಯೋ ಅದಕ್ಕೆ ಕಲಶವೆಂದು ಹೆಸರು.

ಕಲಾ: ಶೇರಂತೆ ಇತಿಕಲಶ: ಅಂದರೆ ಎಲ್ಲಾ ಕಲೆಗಳು ಈ ಭಾಜನದಲ್ಲಿ ಇವೆ ಎಂಬುದಕ್ಕೆ ಇದು ಕಲಶ. ನಮ್ಮ ಶರೀರದಲ್ಲಿ ಆರೋಗ್ಯ, ಕಾಂತಿ, ಚೈತನ್ಯ, ಇತ್ಯಾದಿ ವಿಚಾರಗಳು ವೃದ್ಧಿ ಆಗಬೇಕು ಹಾಗೆ ಬಿಂಬದಲ್ಲಿ ಕಲಾ ಸಾನ್ನಿಧ್ಯ ವೃದ್ಧಿ ಆಗಬೇಕು ಎನ್ನುವ ಅಭಿಪ್ರಾಯದಿಂದ ಕಲಶಗಳಲ್ಲಿ ಭಗವಂತನ ಶತ ರೂಪವನ್ನು ಚಿಂತನೆ ಮಾಡಿ ಮಾಡುವ ಆರಾಧನೆಯೇ "ಕಲಶಾರಾಧನೆ".

ಭಗವಂತ ನೀರನ್ನು ಸೃಷ್ಟಿ ಮಾಡುವಾಗ ತನಗೆ ತಾನೇ ನೀರಿನಿಂದ ಅಭಿಷೇಕ ಮಾಡೋ ಮುಖೇನ "ನೀರಿನ ಸೃಷ್ಟಿ" ಭಗವಂತ ತನಗೆ ತಾನೇ ಆರತಿ ಮಾಡುವ ಮುಖಾಂತರವಾಗಿ ಅಗ್ನಿಯನ್ನು ಸೃಷ್ಟಿ ಮಾಡಿದ ಹಾಗೆಯೇ ನೀರನ್ನು ಸೃಷ್ಟಿ ಮಾಡಿರುವುದರಿಂದಾಗಿ ನೀರಿನಿಂದ ಅಭಿಷೇಕ ಮಾಡುವ ಸತ್ ಸಂಪ್ರದಾಯ ಬಂದಿದೆ. ಹೀಗೆ ಕಲಶದಲ್ಲಿ ವಿಶೇಷ ಕಲೆಗಳನ್ನು ಆವಾಹನೆ ಮಾಡಿ ಆ ನೀರನ್ನು ಪ್ರತಿಮೆಗಳಿಗೆ ಅಭಿಷೇಕ ಮಾಡಿದಾಗ ಕಲಾ ಸಾನ್ನಿಧ್ಯ ವೃದ್ಧಿ ಆಗುತ್ತದೆ.

ಭಗವಂತನ ಸಾನ್ನಿಧ್ಯವೃದ್ಧಿಯು ಬಿಂಬದಲ್ಲಾದರೆ ಆ ಬಿಂಬ ಅನುಗ್ರಹಕಾರಕ. ಅಂತಹ ಬಿಂಬದ ಸಾನ್ನಿಧ್ಯವೃದ್ಧಿ ಎಂಬ ಸಂಪತ್ತು ಮಲಗಿರುವ ವಸ್ತುವೇ ಶಾಸ್ತ್ರೋಕ್ತವಾಗಿ ಕಲಶ ಎನ್ನಲ್ಪಡುತ್ತದೆ. ಅದರಲ್ಲಿರುವ ನೀರು ದೇವರಿಗೆ ಅಭಿಷೇಕವಾಗಿ ಸಾನ್ನಿಧ್ಯವೃದ್ಧಿಯಾಗುತ್ತದೆ. ನಂತರ ತೀರ್ಥವಾಗುತ್ತದೆ. ಅಂತಹ ಮಂತ್ರಿತವಾದ ಸಾನ್ನಿಧ್ಯವೃದ್ಧಿಗೆ ಕಾರಣವಾದ ನೀರನ್ನು ಪೂಜಿಸುವ ಸಂದರ್ಭ ಅದು ತುಂಬಿರುವ ಪಾತ್ರೆಗೇನೇ ಪೂಜೆಯಾಗುತ್ತದೆ. ಹಾಗಾಗಿ ಆವಾಹಿಸಲ್ಪಡುವ ದೇವತೆಗಳನ್ನೂ ಕಲಶ ದೇವತೆಗಳೆನ್ನುತ್ತೇವೆ. ಅಂತಹ ಕಲಶಪಾತ್ರೆಗಳು ದೇವರ ಪ್ರತೀಕಗಳಾಗುತ್ತವೆ. ನಿರ್ಮಾಲ್ಯವಾಗಿ ನಮಗೆ ಸಂಪತ್ತನ್ನು ಕೊಡುವ ಸಾಧನಗಳಾಗುತ್ತವೆ.

ಕಲಶದ ಶಿರೋಭಾಗದಲ್ಲಿ ವಿಷ್ಣುವಿನ ಚಿಂತನೆ, ಕಂಠ ಭಾಗದಲ್ಲಿ ರುದ್ರನ ಚಿಂತನೆ, ಮೂಲ ಭಾಗದಲ್ಲಿ ಬ್ರಹ್ಮನ ಚಿಂತನೆ, ಮಧ್ಯಭಾಗದಲ್ಲಿ ಮಾತೃಕಾ ಅಭಿಮಾನಿಗಳ ಚಿಂತನೆ, ಉದರ ಭಾಗದಲ್ಲಿ ಎಲ್ಲಾ ಸಾಗರಗಳ ಹಾಗೂ ಸಪ್ತ ದ್ವೀಪಗಳ ಹಾಗೂ ಭೂಮಿಯ ಚಿಂತನೆ ಹಾಗೂ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಈ ನಾಲ್ಕು ವೇದಗಳು. ಈ ರೀತಿಯಾಗಿ ಕಲಶ ದೇವತೆಗಳನ್ನು ಚಿಂತನೆ ಮಾಡಬೇಕು.
ಶಾಸ್ತ್ರವಚನ:

**ಕಲಶ ಕೀರ್ತಿಮಾಯುಷ್ಯಂ ಪ್ರಜ್ಞಾಂ ಮೇಧಾಂ ಶ್ರೀಯಂ ಬಲಂ |**
**ಯೋಗ್ಯತಾಂ ಪಾಪಹಾನಿಂ ಚ ಪುಣ್ಯವೃದ್ಧಿಂ ಚ ಸಾಧಯೇತ್ ||**

ಕಲಶ ಆರಾಧನೆ ಮಾಡುವುದರಿಂದ ಒಳ್ಳೆ ಕೀರ್ತಿ, ಆಯುಷ್ಯ, ಪ್ರಜ್ಞೆ, ಮೇಧಾ, ಶ್ರೀಯ, ಬಲ, ಯೋಗ್ಯತೆ ಹಾಗೂ ಪಾಪನಾಶ ಆಗಿ ಭಗವಂತನ ಅನುಗ್ರಹ ಪ್ರಾಪ್ತಿ ಆಗುತ್ತದೆ. ಹಾಗಾಗಿ ಕಲಶ ಆರಾಧನೆಯನ್ನು ಎಲ್ಲರೂ ತಪ್ಪದೇ ಮಾಡಬೇಕು.

**ಭಗವದ್ಭಕ್ತರೇ,**
**ನಮ್ಮ ಶ್ರೀ ಗೋಪಾಲಕೃಷ್ಣ ದೇವರ ಬ್ರಹ್ಮಕಲಶಾಭಿಷೇಕವು ರವಿವಾರ ದಿನಾಂಕ 6 ಫೆಬ್ರುವರಿ 2022 ರಂದು ನಡೆಯಲಿದೆ.**

ಈ ಬ್ರಹ್ಮಕಲಶಾಭಿಷೇಕವೆಂಬ ಮಹಾಸತ್ರದಲ್ಲಿ ಭಾಗವಹಿಸಿ ಯಥಾಶಕ್ತಿ ಶ್ರೀಕಲಶವನ್ನು ಸ್ವೀಕರಿಸಿ ಶ್ರೀದೇವರ ಕರುಣಾನುಗ್ರಹವೆಂಬ ಕೃಪೆಗೆ ಪಾತ್ರರಾಗಿ ಧನ್ಯರಾಗಬೇಕಾಗಿ ಕೇಳಿಕೊಳ್ಳುತ್ತೇವೆ.

| ಎ.ಪಿ.ಕೆ.ಪೋತಿ | ಡಾ. ಸುರೇಶ್ ರಾವ್ | ಎ.ಎಸ್.ರಾವ್ |
|---|---|---|
| ಗೌ.ಕಾರ್ಯದರ್ಶಿ | ಅಧ್ಯಕ್ಷರು | ಕಾರ್ಯದರ್ಶಿ-ವಿಶ್ವಸ್ಥ ಮಂಡಳಿ |

**SILVER KALASHA SEVA** **Rs. 17500/-**
**COPPER KALASHA SEVA** **Rs. 3000/-**

Please book your **KALASHA SEVA** online @ www. bskba.com or draw the cheque in favour of **"GOPALAKRISHNA PUBLIC TRUST"** payable at Mumbai.

Bank Details :

**For Indian Rupees from Indian Nationals only**

| | |
|---|---|
| **Beneficiary** | : Gopalakrishna Public Trust |
| **Bank** | : Karnataka Bank Ltd. |
| **Branch** | : Sion (E) |
| **Account type** | : Savings |
| **Account No.** | : 0852500101145701 |
| **IFSC** | : KARB0000085 |

**Write to secretary@bskba.com with UTR number**




## GOPALAKRISHNA PUBLIC TRUST

**Regd. No. E25308 (Mumbai)**

Gokul, Gokul Marg, Plot No. 273, Sion (E), Mumbai - 400 022.
Tel. : +91 22 2409 4061, +91 22 2409 9728 Mob. : +91 9869007308
Website : www.bskba.com / www.gokulprojects.com Email : gpt@bskba.com

| ಕ್ರ.ಸಂ.<br>Sr.No. | ಬ್ರಹ್ಮಕಲಶ ವಿಶೇಷ ಸೇವೆಗಳು<br>Brahmakalasha Special Sevas | ಮೊತ್ತ ರೂ.<br>Amount Rs. |
|---|---|---|
| 1.<br>1. | ರಜತ ಕಲಶ ಒಂದಕ್ಕೆ<br>Silver Kalasha per piece | 17,500//-<br>17,500/- |
| 2.<br>2. | ರಜತ ಖಂಡ ಕಲಶ ಒಂದಕ್ಕೆ<br>Silver Khandha kalasha per piece | 25,000/-<br>25,000/- |
| 3.<br>3. | ತಾಮ್ರದ ಕಲಶ (ರಜತ ಲೇಪಿತ)<br>Copper Kalasha with silver coating per piece | 3,000/-<br>3,000/- |
| 4.<br>4. | ಅಥರ್ವಶೀರ್ಷ ಗಣಯಾಗ<br>Atharva Sheersha Ganayaga | 25,000/-<br>25,000/- |
| 5.<br>5. | ದುರ್ಗಾ ನಮಸ್ಕಾರ ಪೂಜೆ<br>Durga Namaskara pooje | 20,000/-<br>20,000/- |
| 6.<br>6. | ಚಂಡಿಕಾ ಹೋಮ<br>Chandika Homa | 30,000/-<br>30,000/- |
| 7.<br>7. | ಪೂರ್ಣಮಾನ ನವಗ್ರಹಹೋಮ<br>Poornamana Navagraha Homa | 30,000/-<br>30,000/- |
| 8.<br>8. | ಸಂಜೀವಿನಿ ಮೃತ್ಯುಂಜಯ ಮಹಾಯಾಗ<br>Sanjeevini Mrutyunjaya Mahayaga | 20,000/-<br>20,000/- |
| 9.<br>9. | ನಾಗತನುತರ್ಪಣ ಪ್ರಸನ್ನ ಪೂಜೆ<br>Nagatanutarpana Prasanna pooje | 50,000/-<br>50,000/- |
| 10.<br>10. | ಅಷ್ಟಾಕ್ಷರ ಮಂತ್ರ ಹೋಮ<br>Ashtakshara Mantra Homa | 10,000/-<br>10,000/- |
| 11.<br>11. | ಚಕ್ರಾಬ್ಜಮಂಡಲ ಪೂಜೆ<br>Chakrabja Mandala Pooje | 10,000/-<br>10,000/- |
| 12.<br>12. | ಶ್ರೀಕೃಷ್ಣ ಮಂತ್ರಹೋಮ<br>Sri Krishna Mantra Homa | 10,000/-<br>10,000/- |
| 13.<br>13. | ಗೋದಾನ<br>Godana | 5,000/-<br>5,000/- |
| 14.<br>14. | ಅನ್ನ ಸಂತರ್ಪಣೆ<br>Anna Santarpane | 2,000/- ಅಥವಾ ಹೆಚ್ಚು<br>2,000/- and above |

**ಬ್ರಹ್ಮಕಲಶ ಧಾರ್ಮಿಕ ವಿಧಿಗಳಿಗೆ ಭಕ್ತಾದಿಗಳು ದೇಣಿಗೆ ರೂಪದಲ್ಲಿ ನೀಡುವ ಯಾವುದೇ ಮೊತ್ತವನ್ನು ಆದರ ಪೂರ್ವಕವಾಗಿ ಸ್ವೀಕರಿಸಲಾಗುವುದು.**

**Donation of any amount towards sevas will be accepted whole heartedly.**

*With Best Compliments From*

# A
# Well Wisher



ಸ್ವಲ್ಪ ಅಧ್ಯಾತ್ಮ

# ಭಗವದ್ಗೀತೆ ! ಏನಿದರ ಗಾಥೆ?

✍ ಎನ್ನಾರ್ ರಾವ್

*(ಹಿಂದಿನ ಸಂಚಿಕೆಯಿಂದ ಮುಂದುವರೆದುದು...)*

೧೫. ಹೇ ಪಾರ್ಥ, ಇಂದ್ರಿಯ, ಪ್ರಾಣ, ಮನೋವ್ಯಾಪಾರಗಳನ್ನು ಶಾಸ್ತ್ರರೀತಿಯಲ್ಲಿ ಅರಿತು ತನ್ನ ಸಾತ್ವಿಕ ಬುದ್ಧಿಯಿಂದ ಸಮನ್ವಯಿಸಿ, ಭಗವದರ್ಪಣ ಭಾವದಲ್ಲಿ ಕರ್ಮಗಳನ್ನು ನಿರ್ವಹಿಸುವ ದೃಢತೆಯನ್ನು, ಸಾತ್ವಿಕಧೃತಿ ಎಂದು ಹೇಳುತ್ತಾರೆ. ಧೈರ್ಯ ಸ್ಥೈರ್ಯಗಳಿಂದ ಧರ್ಮಾರ್ಥ ಕಾಮಗಳನ್ನು ಪಡೆದು ಅನುಭವಿಸುವ ಮನುಷ್ಯನ ಧೈರ್ಯವನ್ನು, ಕರ್ಮಗಳನ್ನು ಮಾಡಿ, ಅದರಿಂದ ಬರುವ ಫಲಗಳನ್ನು ತನ್ನದೆಂದು ತಿಳಿದು ಅವುಗಳಲ್ಲಿ ಮೋಹ ಅಭಿಮಾನಗಳನ್ನಿಡುವವನ ಧೈರ್ಯವನ್ನು ರಾಜಸಧೃತಿ ಎನ್ನುತ್ತಾರೆ. ಅತಿಯಾದ ನಿದ್ರೆ, ಕನಸು, ಭಯ, ಚಿಂತೆ, ವಿಷಾದ, ಹಮ್ಮುಗಳನ್ನು ಬಿಡಲಾಗದ್ದು ಒಂದು ದುಷ್ಟ ಬುದ್ಧಿಯೆ. ಅಂತಹವನ ಧೈರ್ಯವನ್ನು ತಾಮ ಸಧೃತಿ ಎನ್ನುತ್ತಾರೆ.

೧೬. ಗುಣಭೇದಕ್ಕೆ ತಕ್ಕಂತೆ ಸುಖವೂ ಮೂರು ವಿಧವಾಗಿವೆ. ಪ್ರಯತ್ನ, ಸಾಧನೆ, ಅಭ್ಯಾಸದಿಂದ, ಚಿರಕಾಲ ಅನುಭವಿಸಲು ಸಿಗುವ ಸುಖವು, ದುಃಖ ಸಂಕಟಗಳನ್ನು ಕೊನೆಗೊಳಿಸಲು ಶಕ್ತವಾದ ಸುಖ. ಆರಂಭದಲ್ಲಿ ಅಹಿತವಾಗಿಯೋ, ವಿಷದಂತೆಯೋ ತೋರಿದರೂ, ಅಂತ್ಯದಲಿ ಅಮೃತದಂತಾಗಿ ಚಿತ್ತವನ್ನು ಭಗವಂತನ ಅನುಗ್ರಹದಿಂದ ಪ್ರಸನ್ನಗೊಳಿಸುವ ಸುಖವು ಸಾತ್ವಿಕ ಸುಖ ಎನಿಸಿಕೊಳ್ಳುತ್ತದೆ. ಇಂದ್ರಿಯಗಳು ವಿಷಯಾಸಕ್ತವಾದರೆ ಆರಂಭದಲ್ಲಿ ಅಮೃತದಂತೆ ತೋರುವ ಸುಖ, ಕರ್ಮದ ಪರಿಣಾಮದಲ್ಲಿ ಕೊನೆಗೆ ವಿಷದಂತೆ ಆಗುವುದು ರಾಜಸ ಸುಖ ಎನಿಸಿಕೊಳ್ಳುತ್ತದೆ. ಮೊದಲಿನಿಂದ ಕೊನೆತನಕ ತನಗೆ ಮಂಕು ಕವಿಸುತ್ತ, ನಿದ್ರೆ, ಆಲಸ್ಯ, ಮರೆವು, ಭ್ರಾಂತಿಯಲ್ಲಿ ಸುಖವಿರುವಂತೆ ತೋರುವುದನ್ನು ತಾಮಸ ಸುಖ ಎನ್ನುತ್ತೇವೆ.

೧೭. ಪ್ರಕೃತಿಯಿಂದ ಹುಟ್ಟುವ ಈ ಮೂರು ಗುಣಗಳಿಗೆ ಸಂಬಂಧಪಡದ ಪ್ರಾಣಿಗಳು ಭೂಲೋಕದಲ್ಲಿಲ್ಲ. ಹಾಗೆಯೇ ಸ್ವರ್ಗದಲ್ಲೂ ಇಲ್ಲ. ಅವರವರ ಸ್ವಭಾವದಿಂದ ಬರುವ ಸತ್ವ, ರಜ, ತಮೋಗುಣಗಳು ಸಮಾಜದಲ್ಲಿ ನಾಲ್ಕು ವರ್ಣದವರಾಗಿ ವಿಂಗಡಿಸಲ್ಪಟ್ಟಿರುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಿಗೆ ಭಿನ್ನ ಭಿನ್ನವಾಗಿವೆ. ಬ್ರಾಹ್ಮಣನಿಗೆ, ಇಂದ್ರಿಯ ನಿಗ್ರಹ, ಅಂತರ್ ಮತ್ತು ಬಾಹ್ಯ ಶುದ್ಧಿ, ಸಹನೆ, ತಪಸ್ಸು, ಋಜುಸ್ವಭಾವ, ಜ್ಞಾನ, ವಿಜ್ಞಾನ, ಆಸ್ತಿಕತೆ - ಇವು ಜನ್ಮದಿಂದಲೆ ಸಹಜವಾಗಿ ಬರುವುದು. ಕ್ಷತ್ರಿಯನಿಗೆ ಶೌರ್ಯ, ತೇಜಸ್ಸು, ಧೈರ್ಯ, ದಕ್ಷತೆ, ಯುದ್ಧದಲ್ಲಿ ಸ್ಥಿರತೆ, ದಾನಬುದ್ಧಿ, ನಾಯಕತ್ವದ ಭಾವ ಸಹಜ ಸ್ವಭಾವಗಳು. ವೈಶ್ಯನಿಗೆ, ವ್ಯವಸಾಯ, ಪಶುಸಂರಕ್ಷಣೆ, ವ್ಯಾಪಾರ ಸಹಜ ಸ್ವಭಾವ. ಹಾಗೆಯೆ, ಸೇವೆಯನ್ನು ಮಾಡುವುದು ಶೂದ್ರರ ಸಹಜ ಸ್ವಭಾವ. ಯಾವುದೇ ವರ್ಣದವರಾದರೂ ಅವರವರ ಸ್ವಭಾವಕ್ಕೆ ತಕ್ಕಂತೆ ಇರುವ ಕರ್ಮಗಳನ್ನು ಮಾಡುತ್ತ, ಉತ್ತಮ ಸಿದ್ಧಿಯನ್ನು ಪಡೆಯಬಹುದು. ಅದನ್ನು ಪಡೆಯುವ ವಿಧಾನವನ್ನು ತಿಳಿಸುತ್ತೇನೆ ಕೇಳು, ಎನ್ನುತ್ತಾನೆ ಭಗವಂತ.

೧೮. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಅವರವರ ವಿಹಿತ ಕರ್ಮಗಳನ್ನು ಮಾಡುತ್ತ, ಸಕಲದಲ್ಲೂ, ಸಕಲ ಚರಾಚರ ವಸ್ತುಗಳಲ್ಲಿಯೂ ಇರುವ, ತುಂಬಿರುವ, ವ್ಯಾಪಿಸಿರುವ ಪರಬ್ರಹ್ಮನನ್ನು ಆರಾಧಿಸುತ್ತ, ಮನುಷ್ಯನು ಸಿದ್ಧಿಯನ್ನು ಪಡೆಯುತ್ತಾನೆ. ತನ್ನ ಸ್ವಭಾವಕ್ಕೆ ಯೋಗ್ಯದ ಸ್ವಧರ್ಮವನ್ನು ಮಾಡುವವನು, ಯಾವ ರೀತಿಯ ಕೆಟ್ಟ ಪರಿಣಾಮಗಳಿಗೆ ಒಳಗಾಗುವುದಿಲ್ಲ. ಪಾಪವನ್ನು ಹೊಂದುವುದಿಲ್ಲ. ಪುಣ್ಯವನ್ನೆ ಸಂಪಾದಿಸುತ್ತಾನೆ. ತನಗೆ ತನ್ನ ಸ್ವಭಾವದಲ್ಲಿ ಬಂದಿರುವ ಕರ್ಮಗಳನ್ನು, ಅದರ ಪರಿಣಾಮಗಳನ್ನು ಲೆಕ್ಕಿಸದೆ, ಫಲವನ್ನು ಆಶಿಸದೆ, ತನ್ನ ಯೋಗಕ್ಷೇಮವು ಭಗವಂತನ ಕಾರ್ಯವೆಂದು ತಿಳಿದು, ನಿರುಮ್ಮಳನಾಗಿ ಭಗವತ್ಸೇವೆಯೆಂದು ತಿಳಿದು ಕರ್ಮಗಳನ್ನು ಮಾಡುವವನು ಸಿದ್ಧಿಯನ್ನು ಪಡೆಯುತ್ತಾನೆ. ಬೇರೆ ಧರ್ಮ (ವರ್ಣಧರ್ಮ) ಅದೆಷ್ಟೇ ಉತ್ತಮವೆನಿಸಿದರೂ, ತನ್ನ ವರ್ಣಧರ್ಮ ಅದೆಷ್ಟೇ ತಪ್ಪು ಎನಿಸಿದರೂ, ತನ್ನ

ಧರ್ಮವನ್ನು ಬಿಡದೇ ಅದನ್ನು ನಡೆಸಿಕೊಂಡು ಹೋಗುವುದು ಶ್ರೇಯಸ್ಕರ ಎನ್ನುತ್ತಾನೆ ಭಗವಂತ. ಪರಧರ್ಮ ಅದೆಷ್ಟೇ ಉತ್ತಮವೆನಿಸಿದರೂ ಅದನ್ನು ಒಪ್ಪಿ ಅದರಲ್ಲಿ ತೊಡಗಿಕೊಳ್ಳುವುದಕ್ಕಿಂತ ತನ್ನ ಧರ್ಮದಲ್ಲಿ ಸಾಯುವುದು ಮೇಲು. ತನ್ನ ಸ್ವಭಾವಕ್ಕೆ ತಕ್ಕಂತೆ ತನ್ನ ಧರ್ಮವನ್ನು ನಿರ್ವಹಿಸುವವನನ್ನು ಯಾವ ಪಾಪವೂ ಕಾಡುವುದಿಲ್ಲ. ಸಹಜವಾಗಿ ಬಂದಿರುವ ತನ್ನ ಧರ್ಮವು ದೋಷಯುಕ್ತವೆನಿಸಿದರೂ ಅದನ್ನು ತ್ಯಜಿಸಬಾರದು. ಬೇರೊಂದು ಧರ್ಮವನ್ನು ಹಿಡಿಯುತ್ತೇನೆ ಅದರಂತೆ ಕರ್ಮಗಳನ್ನು ಮಾಡುತ್ತೇನೆ ಎನ್ನುವಂತಿಲ್ಲ. ಎಲ್ಲ ಧರ್ಮಗಳಲ್ಲೂ, ಒಂದಲ್ಲ ಒಂದು ದೋಷವಿರುವುದು ನಿಜ. ಅವು ಅಗ್ನಿಯಲ್ಲಿರುವ, ಅದರಿಂದಲೆ ಬರುವ ಹೊಗೆಯಂತೆ.

೧೯. ಶ್ರೀಕೃಷ್ಣ ಪರಮಾತ್ಮ ಇಲ್ಲಿ ಹೇಳಿರುವುದು ಸ್ವಭಾವ ಜನ್ಯ ವರ್ಣಧರ್ಮ, ಜಾತಿಯಿಂದ ಬಂದಿರುವ ವರ್ಣಧರ್ಮವಲ್ಲ, ಎನ್ನುವುದನ್ನು ನಾವು ಅರ್ಥೈಸಿ ತಿಳಿಯಬೇಕಾಗಿದೆ. ಎಲ್ಲ ದೇಶಗಳಲ್ಲು, ಎಲ್ಲ ಸಮಾಜದಲ್ಲೂ, ಈ ರೀತಿಯ ವರ್ಣಧರ್ಮ ಇಂದಿಗೂ ಇದೆ. ತಾನು ಯಾವ ಯಾವ ಕೆಲಸನ್ನು ಮಾಡುತ್ತಾನೆ, ಅದರಲ್ಲಿ ಸಾಧನೆಯನ್ನು ಮಾಡುತ್ತಾನೆ ಎಂಬುವುದರಲ್ಲಿ ಆತನ ವರ್ಣಧರ್ಮ ನಿಯತವಾಗುತ್ತದೆ. ಜಾತಿಯಿಂದ ಧರ್ಮವಲ್ಲ, ಕಸುಬಿನಿಂದ ಧರ್ಮ. ಈಗ ಎಲ್ಲ ಜಾತಿಯವರೂ ಎಲ್ಲ ಕಸುಬನ್ನು ಮಾಡುವವರಾಗಿದ್ದಾರೆ. ಅವರವರ ಕಸುಬಿನಂತೆ ಅವರ ವರ್ಣಧರ್ಮ. ಒಬ್ಬನೇ ಅನೇಕ ಕಸುಬುಗಳನ್ನು ಮಾಡುತ್ತಾನೆ. ಆಯಾ ಕೆಲಸಗಳನ್ನು ಮಾಡುತ್ತಿರುವಾಗ ಆತನದು ಆಯಾ ವರ್ಣಧರ್ಮ.

೨೦. ವಿಷಯ ಸಂಗಗಳಿಗಂಟದೆ ಅಂತಃಕರಣವನ್ನು ಜಯಿಸಿ, ನಿಗ್ರಹಿಸಿ, ಮನಸ್ಸನ್ನು ತನ್ನ ಅಧೀನದಲ್ಲಿಟ್ಟುಕೊಂಡು, ಸ್ವರ್ಗ ಸುಖಗಳ ಬಯಕೆಗಳಿಲ್ಲದಿರುವವನು, ತಾನು ಮಾಡುವ ಎಲ್ಲ ಕರ್ಮಗಳ ಫಲ, ಕರ್ತೃ ಭಾವವನ್ನು, ಭಗವಂತನದೆಂದು ತಿಳಿಯುತ್ತ ಕರ್ಮಗಳನ್ನು ಮಾಡುವವನು ಮುಕ್ತಿಯ ಸ್ಥಿತಿಯನ್ನು ಪಡೆಯುತ್ತಾನೆ.

೨೧. ಈಗ, ಹಿಂದೆ ತಿಳಿಸಿದ ರೀತಿಯಲ್ಲಿ ಸಿದ್ಧಿಯನ್ನು ಪಡೆದವರು, ಪರಬ್ರಹ್ಮನನ್ನು ಪಡೆಯಲು ಬೇಕಾದ ಯಾವ ಉತ್ತಮವಾದ ಜ್ಞಾನನಿಷ್ಠೆಯ ವಿಧಿವಿಧಾನಗಳನ್ನು ಹೇಗೆ ತಮ್ಮಲ್ಲಿ ಅಳವಡಿಸಿಕೊಂಡರು? ಇವನ್ನು ಸಂಕ್ಷೇಪದಲ್ಲಿ ತಿಳಿಸುತ್ತೇನೆ. ಪರಿಶುದ್ಧ ಧೃತಿಯನ್ನು ಹೊಂದಿ, ಬುದ್ಧಿಯಿಂದ ಮನಸ್ಸನ್ನು ನಿಗ್ರಹಿಸಿ, ಶಬ್ದ ರಸಾದಿ ಇಂದ್ರಿಯದ ವಿಷಯಗಳನ್ನು ತ್ಯಾಗ ಮಾಡಿ, ರಾಗ, ದ್ವೇಷಗಳನ್ನು ಬಿಟ್ಟು, ಸಂಗವನ್ನು ತೊರೆದು, ಏಕಾಂತದಲಿದ್ದು, ಮಿತಾಹಾರವನ್ನು ಸೇವಿಸುತ್ತ, ಒಳ್ಳೆಯ ವಿಚಾರ, ವಿಷಯಗಳಲ್ಲಿ ಮನಸ್ಸು, ಮನಸ್ಸಿನ ಆಸೆಗಳನ್ನಿಟ್ಟು, ಯಮ, ನಿಯಮ, ಧ್ಯಾನಗಳನ್ನು ಪಾಲಿಸುತ್ತ, ವೈರಾಗ್ಯದ ಸಾಧನೆಯಲಿದ್ದು, ಅಹಂಕಾರ, ಅಭಿಮಾನ, ಡಂಬ, ಆಸೆ, ಕ್ರೋಧ, ವಸ್ತುಸಂಗ್ರಹ ಬುದ್ಧಿಯನ್ನು ತ್ಯಜಿಸಿ, ನಾನು, ನನ್ನವರು, ನನ್ನದು ಎಂಬ ಮೋಹವನ್ನು ಬಿಟ್ಟು ಶಾಂತ ಮನಸ್ಸಿನವನಾದ ಮಾನವ ಪರಬ್ರಹ್ಮನ ಸಾಕ್ಷಾತ್ಕಾರವನ್ನು ಹೊಂದಲು ಸಮರ್ಥನಾಗುತ್ತಾನೆ. ಈ ರೀತಿಯ ಸಾಧನೆಯನ್ನು ಮಾಡಿ, ಶಾಂತ, ಸಂತೋಷ ಚಿತ್ತ ಮನಸ್ಸನ್ನು ಹೊಂದಿ ಬ್ರಹ್ಮನಿಷ್ಠನಾದವನು, ಏನನ್ನೂ ಆಶಿಸುವುದಿಲ್ಲ, ಯಾವುದಕ್ಕೂ ದುಃಖ ಪಡುವುದಿಲ್ಲ. ಸಕಲ ಭೂತಗಳಲ್ಲಿ ಸಮನಾದ ಭಾವವನ್ನು ಹೊಂದಿ, ನನ್ನಲ್ಲಿ ಅಂದರೆ ಪರಬ್ರಹ್ಮನಲ್ಲಿ ಅತಿ ಹೆಚ್ಚಿನ ಭಕ್ತಿಯನ್ನು ಹೊಂದುವವನು. ನಾನು ಎಲ್ಲಿ, ಹೇಗೆ, ಯಾವ ಹೆಸರಿನಿಂದ ಇರುವೆನೋ, ಆ ನನ್ನ ಸ್ವರೂಪ, ನನ್ನ ಪ್ರಭಾವ, ಮಹಿಮೆಗಳನ್ನು ಭಕ್ತಿಯಿಂದ ತಾನು ತಿಳಿಯುವನು, ನನ್ನನ್ನು ಕುರಿತ ಯಥಾರ್ಥವಾದ ಅರಿವು ತಿಳಿವಳಿಕೆಗಳನ್ನು ಹೊಂದಿ ಪರಂಧಾಮವನ್ನೇ ಸೇರುವನು. ತಾನು ಮಾಡುವ ಎಲ್ಲ ವ್ಯವಹಾರಗಳಿಗೂ ನನ್ನನ್ನೆ ಆಶ್ರಯಿಸಿ, ನಾನು ಆ ವ್ಯವಹಾರಗಳನ್ನು ಮಾಡಿಸುತ್ತೇನೆ ಎಂಬ ಭಗವಂತನ ಕರ್ತೃತ್ವ ಭಾವವನ್ನು ತಿಳಿದು, ವಿಹಿತ ಕರ್ಮಗಳನ್ನು ಮಾಡುವವನು ನನ್ನ ದಯೆ ಅನುಗ್ರಹಗಳನ್ನು ಪಡೆದು, ಪುನರ್ಜನ್ಮವಿಲ್ಲದ ಮೋಕ್ಷಸ್ಥಾನವನ್ನೆ ಪಡೆಯುವನು. ಇಂತಹವನು ತನ್ನ ಹೃದಯದಿಂದ, ಮನ, ಚಿತ್ತಗಳಿಂದ, ಎಲ್ಲ ಕರ್ಮಗಳನ್ನು ನನಗೆ ಸಮರ್ಪಿಸುತ್ತ ಆ ಕರ್ಮಗಳನ್ನು ಮಾಡುವನು. ಹಾಗಾಗಿ, ಪಾರ್ಥ! ನಾನು ಅಂದರೆ ಪರಬ್ರಹ್ಮನನ್ನು ಸರ್ವೋತ್ತಮ ತತ್ತ್ವವೆಂದು ತಿಳಿದು ಜ್ಞಾನದ ಸಾಧನೆಯನ್ನು ಮಾಡು, ಜ್ಞಾನದ ಅನುಷ್ಠಾನವನ್ನು ಬದುಕಿನಲ್ಲಿ ಅಳವಡಿಸಿಕೊ, ನನ್ನಲ್ಲೆ ನಿನ್ನ ಮನಸ್ಸನ್ನು ನಿಲ್ಲಿಸು. ಹಾಗೆ ನನ್ನಲ್ಲೆ ಮನವಿಟ್ಟು ನೀನು ಕರ್ಮಗಳನ್ನು ಮಾಡಿದಾಗ, ನನ್ನ ದಯೆ ಕರುಣೆಗಳನ್ನು ಪಡೆದು, ಎಲ್ಲ ದುಃಖ ಸಂಕಟಗಳಿಂದ ಪಾರಾಗುತ್ತೀಯೆ. ಹಾಗಲ್ಲದೆ,

ಅಹಂಕಾರದಿಂದ ನೀನು ಸ್ವತಂತ್ರನೆಂದು ತಿಳಿದು, ಧರ್ಮದ, ಹಿತಕರವಾದ ನನ್ನ ನುಡಿಗಳನ್ನು ಕೇಳದಿದ್ದರೆ, ಅದು ನಿನಗೆ ಅನರ್ಥಗಳನ್ನೆ ತರುತ್ತದೆ. ನೀನು ನಿನ್ನ ಅಹಂಕಾರದಿಂದ ಯುದ್ಧ ಮಾಡುವುದಿಲ್ಲ ಎಂದರೂ, ಆ ನಿನ್ನ ಯೋಜನೆಯು ವ್ಯರ್ಥವೆಂದು ನಿನಗೇ ಗೊತ್ತಾಗುತ್ತದೆ. ನಿನ್ನ ಆ ಯೋಚನೆಯು ಫಲಿಸುವುದಿಲ್ಲ. ನಿನ್ನ ಪ್ರಕೃತಿ ಸ್ವಭಾವ ಮತ್ತು ದೈವದ ಯೋಜನೆಯು ಬೇರೆಯಾಗಿದೆ. ಅದು ನಿನ್ನನ್ನು ಯುದ್ಧದಲ್ಲಿ ತೊಡಗಿಸಿಯೇ ತೀರುತ್ತದೆ. ಅದು ಮಾತ್ರ ನಿಶ್ಚಯ. ದೈವದ ದಯೆಯಿಲ್ಲದೆ ನೀನು ಸ್ವತಂತ್ರವಾಗಿ ಯಾವ ಯೋಚನೆಯನ್ನೂ, ಯೋಜನೆಯನ್ನೂ ಮಾಡಲಾರೆ. ನೀನು ಯುದ್ಧಮಾಡುವುದು ಸರಿಯಲ್ಲ ಎಂಬ ಯೋಚನೆ ನಿನ್ನ ಬಂಧು ಮೋಹದಿಂದ ಬಂದಿದ್ದು. ನೀನು ಯುದ್ಧವನ್ನು ಇಚ್ಛಿಸದಿದ್ದರೂ ಸಹ ಪೂರ್ವ ಸಂಸ್ಕಾರ, ಸ್ವಧರ್ಮಕ್ಕೆ ಕಟ್ಟುಹಾಕಿದ ಹಾಗೆ, ಯುದ್ಧವನ್ನು ಮಾಡಿಯೇ ತೀರುತ್ತೀಯೆ. ಅವುಗಳ ತಿಳಿವಳಿಕೆಯನ್ನು ನಿನಗೆ ನಾನು ಕೊಟ್ಟೆ ಅಷ್ಟೆ, ಎನ್ನುತ್ತಾನೆ ಭಗವಂತ.

೨೨. ಸರ್ವನಿಯಾಮಕ ಈಶ್ವರನು ಸಕಲ ಪ್ರಾಣಿಗಳ ಹೃದಯದಲ್ಲಿ ಸ್ಥಾಪಿತನಾಗಿದ್ದಾನೆ. ದೇಹರೂಪದ ಯಂತ್ರದಲ್ಲಿರುವ ಸರ್ವ ಜೀವರನ್ನೂ ತನ್ನಿಚ್ಛೆಯಂತೆ ಕರ್ಮದಲ್ಲಿ ತೊಡಗಿಸುತ್ತಾನೆ. ಹಾಗಾಗಿ, ನೀನು ಸರ್ವವಿಧದಿಂದ ಪರಮೇಶ್ವರನನ್ನು ಶರಣುಹೊಂದು. ಆತನ ಅನುಗ್ರಹದಿಂದ ಪರಮ ಶಾಂತಿಯನ್ನು, ಶಾಶ್ವತ ಸ್ಥಾನವನ್ನು ಗಳಿಸುತ್ತೀಯೆ. ರಹಸ್ಯದಲ್ಲಿ ರಹಸ್ಯವಾದ ಈ ಜ್ಞಾನವನ್ನು ನಿನಗೆ ಸಂಪೂರ್ಣವಾಗಿ ತಿಳಿಸಿದ್ದೇನೆ. ಇನ್ನು ವಿಹಿತವಾದ ವಿಮರ್ಶೆಯನ್ನು ಮಾಡಿ ನಿನ್ನ ಮನಸ್ಸಿಗೆ ಯೋಗ್ಯವಾಗಿ ಕಂಡಂತೆ ನೀನು ಮಾಡಬಹುದು. ನಿಶ್ಚಯವಾಗಿ, ನೀನು ನನಗೆ ಪರಮಾಪ್ತ, ಪರಮ ಪ್ರಿಯನಾದವನು. ಹಾಗಾಗಿ ನಿನ್ನ ಹಿತವನ್ನು ಬಯಸಿ, ನಿನ್ನಲ್ಲಿ ನನಗಿರುವ ಪ್ರೀತಿಯಿಂದ ಪರಮ ರಹಸ್ಯದ ಮತ್ತೊಂದು ವಿಷಯವನ್ನು ಹೇಳುತ್ತೇನೆ, ಕೇಳು ಎನ್ನುತ್ತಾನೆ ಶ್ರೀಕೃಷ್ಣ.

೨೩. ನನ್ನಲ್ಲೆ ಮನಸ್ಸನ್ನಿಡು, ನನ್ನಲ್ಲೆ ಭಕ್ತಿಯಿಡು, ನನ್ನನ್ನೆ ಯಜ್ಞದಲಿ ಪೂಜಿಸು, ನನಗೆ ನಮಸ್ಕರಿಸು, ಸತ್ಯವಾಗಿ ನೀನು ಕೊನೆಯಲ್ಲಿ ನನ್ನನ್ನೆ ಪಡೆಯುತ್ತೀಯೆ. ಮಿಕ್ಕೆಲ್ಲ ಧರ್ಮ ಕರ್ಮಗಳನ್ನು ತ್ಯಜಿಸಿ, ಒಂದೇ ಮನಸ್ಸಿನಿಂದ ನನ್ನೊಬ್ಬನಲ್ಲಿ ಶರಣಾಗು, ಯಾವ ದುಃಖವನ್ನೂ ಹೊಂದಬೇಡ, ಎಲ್ಲ ಪಾಪಗಳಿಂದ ಉದ್ಧರಿಸಿ ನಿನ್ನನ್ನು ಪೊರೆಯುತ್ತೇನೆ. ನಿನಗೆ ತಿಳಿಸಿರುವ ಈ ಗೀತೆಯ ಜ್ಞಾನವನ್ನು ತಪಸ್ಸು ಮಾಡದವನಿಗೆ, ನನ್ನಲ್ಲಿ ಭಕ್ತಿಭಾವವಿಲ್ಲದವನಿಗೆ, ಗುರು ಹಿರಿಯರಲ್ಲಿ ಭಕ್ತಿಯಿಲ್ಲದವನಿಗೆ, ಗುರು ಶುಶ್ರೂಷೆ ಮಾಡದವನಿಗೆ, ನನ್ನಲ್ಲಿ ಅಸೂಯೆ ಹೊಂದಿರುವವನಿಗೆ ಹೇಳಬಾರದು. ಇದನ್ನು ನನ್ನ ಭಕ್ತರಿಗೆ ಬೋಧಿಸುವವನು, ನನಲ್ಲಿ ಪರಮ ಭಕ್ತಿಯನ್ನು ಹೊಂದುತ್ತಾನೆ ಮತ್ತು ನನ್ನನ್ನೇ ಸೇರುವನು ಎನ್ನುವುದು ನಿಶ್ಚಯ. ಮನುಷ್ಯಲೋಕದಲ್ಲಿ ಅಂತಹವನಿಗಿಂತ ನನ್ನನ್ನು ವಿಶೇಷವಾಗಿ ಪ್ರೀತಿಸುವ, ಅವನಿಗಿಂತ ಮಿಗಿಲಾದ ನನಗೆ ಪ್ರಿಯವಾದ ವ್ಯಕ್ತಿ ಇನ್ನಾರೂ ಇರುವುದಿಲ್ಲ. ನನ್ನ ಈ ಧರ್ಮಪರ ಸಂವಾದವನ್ನು ಪಠಿಸಿ ಅರಿಯುವ ಮಾನವನ ಸಾಧನೆಯು ಯಜ್ಞಗಳನ್ನು ಮಾಡಿ ನನ್ನನ್ನು ಪೂಜಿಸಿದಂತೆಯೆ ಸರಿ. ಅಸೂಯೆಯನ್ನು ಬಿಟ್ಟು ಶ್ರದ್ಧೆಯಿಂದ ಈ ಗೀತೆಯಲ್ಲಿರುವ ಶಾಸ್ತ್ರವನ್ನು ಕೇಳಿದರೆ ಮಾನವನು ಸಂಸಾರ ಬಂಧನದಿಂದ ಮುಕ್ತನಾಗುತ್ತಾನೆ. ಪುಣ್ಯಾತ್ಮರಿಗೆ ಸಿಗುವ ಉತ್ತಮ ಲೋಕವನ್ನೆ ಪಡೆಯುತ್ತಾನೆ. ನಾ ಹೇಳಿದ ಇವೆಲ್ಲವನು ಏಕಾಗ್ರಚಿತ್ತದಿಂದ ಕೇಳಿದೆಯಲ್ಲವೆ ನೀ ಪಾರ್ಥ? ಅಜ್ಞಾನದಿಂದ ನಿನ್ನಲ್ಲಿ ಬಂದಿದ್ದ ಮೋಹವು ಕಳೆಯಿತಲ್ಲವೆ ಧನಂಜಯನೆ? ಎಂದು ಅರ್ಜುನನ್ನು ಕೇಳುತ್ತಾನೆ, ಶ್ರೀಕೃಷ್ಣ.

೨೪. ಈ ಗೀತಾಜ್ಞಾನವನ್ನು ಭಗವಂತನಿಂದಲೇ ಕೇಳಿದ ಪುಣ್ಯಾತ್ಮ ಅರ್ಜುನ, ಹೇ ಕೃಷ್ಣಾ, ನನಗೆ ಅರಿವು ಬಂತು. ಅಚ್ಯುತನೆ, ನನ್ನ ಎಲ್ಲ ಸಂದೇಹಗಳು ಕಳೆದವು. ನನ್ನ ಮೋಹಭಾವ ಕಳೆಯಿತು. ಈ ಸಂದರ್ಭದಲ್ಲಿ ನನಗೆ ಈ ಹೊತ್ತಿಗೆ ನನ್ನ ಧರ್ಮವಾದ ಯುದ್ಧವನ್ನು ಮಾಡುವುದೆ ಸರಿಯೆಂಬ ಸ್ಮೃತಿ ಬಂತು. ಇದೆಲ್ಲ ನಿನ್ನ ದಯೆ, ನನ್ನ ಮೇಲಿನ ಪ್ರೀತಿಯಿಂದ ನನಗೆ ವಿಹಿತ ಜ್ಞಾನಬೋಧೆಯನ್ನು ಮಾಡಿದೆ. ನೀನು ತಿಳಿಸಿದಂತೆ ಯುದ್ಧ ಮಾಡಲು ನಾನು ಸಿದ್ಧನಾಗಿದ್ದೇನೆ, ಎನ್ನುತ್ತಾನೆ.

೨೫. ಸಂಜಯನ ವರದಿ. ಸಮಾರೋಪ. ನಾನು, ಮಹಾತ್ಮ ವಾಸುದೇವ ಮತ್ತು ಅರ್ಜುನರ ಈ ಸಂವಾದವನ್ನು ಕೇಳಿದೆ. ಅದ್ಭುತವಾದ ಅದನ್ನು ಕೇಳಿ ರೋಮಾಂಚಗೊಂಡಿದ್ದೇನೆ. ನಾನು ಸ್ವತಃ ಕೇಳಿದೆ ಯೋಗೀಶರೀಶ ಸಾಕ್ಷಾತ್ ಶ್ರೀಕೃಷ್ಣ ತಿಳಿಸಿದ ರಹಸ್ಯವನ್ನು. ಈ ಉತ್ಕೃಷ್ಟ ಜ್ಞಾನ ನನಗೆ ವ್ಯಾಸಮಹರ್ಷಿಗಳ ಅನುಗ್ರಹದಿಂದ ದೊರಕಿದ್ದು. ನಾನು ಪಾವನನಾದೆ. ಹೇ ಧೃತರಾಷ್ಟ್ರನೆ, ಈ ಆಶ್ಚರ್ಯಕರವಾದ ಶ್ರೀಕೃಷ್ಣಾರ್ಜುನರ ಸಂವಾದವನ್ನು, ಪುಣ್ಯವನ್ನೆ ತರುವ

ಅವರ ಮಾತುಗಳನ್ನು ನೆನೆನೆನೆದು ಆನಂದದಲ್ಲಿ ತೇಲಿಹೋಗುತ್ತಿದ್ದೇನೆ. ಹೇ! ಧೃತರಾಷ್ಟ್ರ! ಶ್ರೀಹರಿಯ ಅತ್ಯದ್ಭುತ ವಿಶ್ವರೂಪವನ್ನು ನೆನೆಯುತ್ತ, ಸೋಜಿಗ ಪಡುತ್ತ, ನಾನು ಪುನಃ ಪುನಃ ಸಂತೋಷವನ್ನು ಹೊಂದುತ್ತಿದ್ದೇನೆ. ಯೋಗೇಶ ಶ್ರೀಕೃಷ್ಣ, ಧನುವನ್ನು ಧರಿಸಿರುವ ಅರ್ಜುನನು ಇರುವಲ್ಲಿ, ಜ್ಞಾನದ ಹೊಳೆ ಹರಿಯುತ್ತಿರುವಾಗ, ಸುತ್ತ ಮುತ್ತೆಲ್ಲ ಜ್ಞಾನವೇ ಪಸರಿಸಿಕೊಂಡಿರುವಾಗ, ನಿಶ್ಚಯವಾಗಿ, ರಾಜ್ಯ, ಸಂಪತ್ತು, ಜಯ, ನ್ಯಾಯ, ನೀತಿಗಳು ಅಲ್ಲಿ ನೆಲೆಸುತ್ತವೆ. ಯೋಗಮಾರ್ಗಗಳ ಒಡೆಯ ಶ್ರೀಕೃಷ್ಣನಿರುವೆಡೆ, ಶ್ರೇಷ್ಠ ಧನುರ್ಧರ ಅರ್ಜುನನಿರುವೆಡೆ ಸೋಲಿಲ್ಲ. ಔನ್ನತ್ಯ ಮತ್ತು ನಿಶ್ಚಲ ನೀತಿ ನೆಲೆಸುತ್ತವೆ ಎನ್ನುತ್ತಾನೆ.  ಇವರಿಬ್ಬರೂ ಒಟ್ಟಿಗೆ ಇರುವಾಗ ಇನ್ನೇನು ಗತಿ ಎಂದು ಧೃತರಾಷ್ಟ್ರನಿಗೆ ಹೇಳುವ ಬಗೆ.

೨೬. ಧೃತರಾಷ್ಟ್ರ ದೈಹಿಕವಾಗಿ ಕುರುಡ, ಬುದ್ಧಿಯಲ್ಲಿ ವಿವೇಚನೆಯಿಲ್ಲದವನು, ಬುದ್ಧಿಗೇಡಿ, ಹಾಗಾಗಿ ಈ ಮಾತುಗಳನ್ನು ಕೇಳಲಿಲ್ಲ, ಎನ್ನುವ ಹಾಗಿಲ್ಲ. ಧೃತರಾಷ್ಟ್ರ ಸಹ ಅಜ್ಞಾನಿಯಾಗಿರಲಿಲ್ಲ. ಅವನೂ ಜ್ಞಾನಿ, ತಿಳಿದವ, ಅರಿತವ. ಶಾಂತಿ ಸಂಧಾನಕ್ಕೆ ಹಸ್ತಿನಾವತಿಗೆ ಬಂದು ಸಭೆಯಲ್ಲಿ ವಿಶ್ವರೂಪವನ್ನು ತೋರಿದ ಭಗವಂತನನ್ನು ನೋಡಿ, ಅರ್ಥಮಾಡಿಕೊಂಡು, ಆತನ ಉಪದೇಶಗಳನ್ನು ಕೇಳಿ ಅರಿವನ್ನು ಸಂಜಯನಿಗಿಂತಲೂ ಮಿಗಿಲಾಗಿ ಹೆಚ್ಚಿಸಿಕೊಂಡಿದ್ದನು ಎನಿಸುತ್ತದೆ.  ಎಲ್ಲ ಆ ದೇವನ ಆಟ, ಅಪೇಕ್ಷೆ. ಶ್ರೀಕೃಷ್ಣನೇ ಹೇಳಿದ ಹಾಗೆ, ಅತನ ವಿಶ್ವರೂಪದಲ್ಲಿ ತೋರಿದ ಹಾಗೆ, ಪ್ರೇರಣೆ ಮಾಡುವವನೂ ಅವನೆ, ಕರ್ತನೂ ಅವನೆ, ಕರ್ತೃವೂ ಅವನೆ, ಮಾಡುವವನು, ಮಾಡಿಸುವವನು ಅವನೆ, ಯುದ್ಧಮಾಡಿಸುವವನು, ಕೊಲ್ಲುವವನು, ಕಾಪಾಡುವವನೂ ಅವನೆ. ಭೂತ ವರ್ತಮಾನ ಭವಿಷ್ಯತ್ತುಗಳೆಲ್ಲ ಪರಬ್ರಹ್ಮನಿಂದ ನಿಶ್ಚಯವಾಗಿದೆ. ಭವಿಷ್ಯದ ನಿರ್ಣಾಯಕ ಘಟ್ಟಗಳು ನಿಶ್ಚಿತವಾಗಿ ಹೋಗಿರುವಾಗ, ಈ ವರ್ತಮಾನ, ನಮ್ಮ ಕರ್ಮಗಳು ಭವಿಷ್ಯತ್ತಿನಲ್ಲಿ ಆಗಿಹೋಗಿರುವುದಕ್ಕೆ ಪೂರಕ ನಟನೆಗಳಷ್ಟೆ. ಹಾಗಾಗಿ, ಸಾಯುವವರು ಸತ್ತಾಗಿದೆ, ಸೋಲುವವರು ಸೋತಾಗಿದೆ, ಗೆಲ್ಲುವವರು ಗೆದ್ದಾಗಿದೆ, ಯುದ್ಧದಲ್ಲಿ ಸೇರಿರುವವರೆಲ್ಲಾ ನಿಮಿತ್ತ ಮಾತ್ರರು, ತಾನು ಏನು ಮಾಡಿದರೇನು, ಅದು ಆಗುವ ಹಾಗೆಯೇ ಆಗುತ್ತದೆ, ತಾನು ಜಗನ್ನಾಟಕದ ಒಂದು ಭಾಗವಾದ ಮಹಾಭಾರತದಲ್ಲಿ ಒಂದು ಪಾತ್ರಮಾತ್ರ, ಸೂತ್ರಧಾರಿ ಭಗವಂತ. ತನಗಿರುವ ಸ್ವಾತಂತ್ರ್ಯ ಅದನ್ನು ನಿಭಾಯಿಸುವುದು, ಅನುಭವಿಸುವುದು ಮಾತ್ರ ಎಂದು ತಿಳಿದಿದ್ದವನು ಧೃತರಾಷ್ಟ್ರ, ಎನಿಸುತ್ತದೆ ಅಲ್ಲವೆ?

ಹದಿನೆಂಟನೆ ಅಧ್ಯಾಯ ಇಲ್ಲಿಗೆ ಮುಗಿಯುತ್ತದೆ

**। ಶ್ರೀಕೃಷ್ಣ ಕರುಣೆ ನಮ್ಮ ಮೇಲಿರಲಿ ।**

ನಿನ್ನೀ ಬೋಧನೆಯು
ಮಿಥ್ಯೆ ಭ್ರಮೆಗಳಿಂದ ನಮ್ಮನು ಸತ್ಯದರಿವಿನೆಡೆ ನಡೆಸಲಿ
ತಮಸಿನ ಕತ್ತಲಿನಿಂದ ಜ್ಞಾನದ ಬೆಳಕಿನೆಡೆ ನಡೆಸಲಿ
ನಮ್ಮೊಳಕುಳಿತ ನಿನ್ನಾಣತಿಯಂತೆ ಮಾಳ್ಪ ಕರ್ಮಗಳು
ನಮ್ಮನು ಸಾವಿನಿಂದ ಸಾವಿರದೆಡೆ ನಡೆಸಲಿ
ನಮ್ಮೆಲ್ಲ ಸಾಧನೆಗೆ ಮನದಲ್ಲಿ, ಮನದಾಚೆ
ಶಾಂತಿ ಇರಲಿ, ಶಾಂತಿ ಇರಲಿ, ಶಾಂತಿ ಇರಲಿ.

ಮೇಲ್ಲೋಕದಲಿ ಶಾಂತಿ, ನೆಲಸಲಿ ಶಾಂತಿ ಗಗನದಲಿ
ಭೂಲೋಕದಲಿ ಶಾಂತಿ, ನೆಲಸಲಿ ಶಾಂತಿ ನೀರಿನಲಿ
ಗಿಡ ಮರ ಮೂಲಿಕೆಯಲಿ ಶಾಂತಿ, ನೆಲಸಲಿ ಶಾಂತಿ ದೇವಗಣದಲಿ
ಬ್ರಹ್ಮನಲಿ ಶಾಂತಿ, ನೆಲಸಲಿ ಶಾಂತಿ ಎಲ್ಲಿ ನೋಡಿದರಲ್ಲಿ
ಶಾಂತಿ ನೆಲಸಲಿ ನಮ್ಮ ಮನದಲಿ, ನಮ್ಮ ಗಡಣದಲಿ.

**॥ ಶಾಂತಿ ಇರಲಿ, ಶಾಂತಿ ಇರಲಿ, ಶಾಂತಿ ಇರಲಿ ॥** ✦

# ಬಲ್ಲು ಹೇಳಿದ ಕತೆ

✍ ವೆಂಕಟ್ರಾಜ ಯು. ರಾವ್

ಬಲ್ಲು ಹೇಳಿದ ಕತೆಯನ್ನು ಹೇಳುವ ಮೊದಲು, ಬಲ್ಲುವಿನ ಸ್ಥೂಲ ಪರಿಚಯ ಅಗತ್ಯ.

ಬಲ್ಲು, ಅಥವಾ ಇಡೀಯಾಗಿ ಬಲರಾಮ, ಇವನನ್ನು ಒಂದೇ ಜಾಗಕ್ಕೆ, ಅಂದರೆ ಭೂಗೋಲದ ಯಾವುದೇ ಒಂದು ಪ್ರದೇಶಕ್ಕೆ ಒಂದೆರಡು ವರ್ಷಗಳಿಗಿಂತ ಹೆಚ್ಚು ಸಮಯಕ್ಕೆ ಸೀಮಿತಗೊಳಿಸುವುದು ಅಸಾಧ್ಯ. ಒಮ್ಮೆ ನೈಜೀರಿಯದಲ್ಲಿ ಕಾಣಿಸಿಕೊಂಡರೆ, ಸ್ವಲ್ಪವೇ ಸಮಯದಲ್ಲಿ ಸಿಂಗಾಪುರ, ಹಾಂಗ್ ಕೋಂಗ್, ಇಲ್ಲವೆ ದುಬೈಯಲ್ಲಿ ಕಾಣಿಸಿಕೊಂಡಾನು ಅಥವಾ ಜಗತ್ತಿನ ಯಾವುದೇ ಮೂಲೆಯಲ್ಲಾದರೂ. ಅಷ್ಟೇ ಅಲ್ಲ, ಆ ಸಮಾಯಾವಧಿಯಲ್ಲೂ ಅವನ ಪ್ರಯಾಣಗಳು ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುತ್ತವೆ-ಇವತ್ತು ಮಲೇಶಿಯಾವಾದರೆ ನಾಳೆ ಪೇರಿಸ್ ಎನ್ನುವ ಹಾಗೆ. ಹಾಗಾಗಿ, ಅವನಲ್ಲಿ ಹಲವಾರು ದೇಶಗಳ ದೀರ್ಘಾವಧಿಯ ವೀಸಾಗಳಿದ್ದು, ಅವಕ್ಕೆ ಅವನ ಪಾಸ್‌ಪೋರ್ಟ್‌ನಲ್ಲಿ ಜಾಗ ಸಾಕಾಗದೆ, ಹಲವಾರು ಎಕ್ಸ್ಟ್ರಾ ಪಾಸ್‌ಪೋರ್ಟ್ ಪುಸ್ತಕಗಳನ್ನು ಪಡಕೊಂಡು ಈ ವೀಸಾಗಳಿಗಾಗಿಯೇ ಮೀಸಲಾಗಿಟ್ಟಿದ್ದ. ಅವುಗಳನ್ನೆಲ್ಲ ತನ್ನ ಪಾಸ್‌ಪೋರ್ಟಿಗೆ ಜೋಡಿಸಿಡುವುದರಿಂದಾಗಿ, ವಿಮಾನ ಪ್ರಯಾಣಕ್ಕೆ ಚೆಕ್-ಇನ್ ಮಾಡುವಾಗ, ತನ್ನ ಪಾಸ್‌ಪೋರ್ಟ್ ಮತ್ತು ಅದಕ್ಕೆ ಜೋಡಿಸಿದ ವೀಸಾಗಳ ಪುಸ್ತಕಗಳ ಸಾಧಾರಣ ಎರಡಡಿ ಉದ್ದದ ಇಡೀ ಸರಮಾಲೆಯನ್ನೇ ಬಿಡಿಸಿ, ಕೌಂಟರಿನಲ್ಲಿ ತಪಾಸಣೆಗೆ ಕೊಟ್ಟು, ಏರ್ ಲೈನ್ ಸಿಬ್ಬಂದಿಗಳನ್ನು ಕಂಗಾಲು ಪಡಿಸುತ್ತಿದ್ದ.

ಬಲ್ಲು ಮಾಡುವ ಕೆಲಸಗಳು, ಅವುಗಳಲ್ಲಿ ಅವನು ಎದುರಿಸುವ ಸನ್ನಿವೇಶಗಳು, ಅವನೊಡನೆ ವ್ಯವಹರಿಸುವ ಜನಗಳು, ಸಾಲದ್ದಕ್ಕೆ ಬಲ್ಲುವಿನ ಮುಂಗೋಪ, ಅವನ ಮಾತಿಗೆ ಎದುರುತ್ತರ ಕೊಟ್ಟವರ ಕಾಲರ್ ಹಿಡಿಯಲು ಅವನು ಪಡುವ ತವಕ,-ಇವೆಲ್ಲದರ ಕಾರಣ ಅವನ ಅನುಭವದ ಕತೆಗಳು ಅವನು ಭೇಟಿ ಕೊಡುವ ದೇಶಗಳಂತೆ ವೈವಿಧ್ಯಮಯವಾಗಿರುತ್ತಿದ್ದವು. ಇನ್ನು, ಬಲ್ಲು ಹೇಳಿದ ಕತೆಯನ್ನು ಅವನದೇ ಶೈಲಿಯಲ್ಲಿ ಹೇಳದಿದ್ದರೆ ಅದರ ವಾಸ್ತವತೆಗೆ ಕುಂದು ಬಂದೀತು. ಹಾಗಾಗಿ ಇನ್ನು ಮುಂದಿನದು ಅವನು ಹೇಳಿದ ಕತೆಯ ಭಾವಾತ್ಮಕ ನಿರೂಪಣೆ.

...ಆಗ ನಾನು ದುಬೈಯಲ್ಲಿದ್ದೆ. ನನ್ನ ಪರಿಚಯದವರ ಹೋಟೆಲಿನ ಮೇಲ್ವಿಚಾರಣೆ ಮಾಡುತ್ತಿದ್ದೆ. ನನ್ನ ಕೆಲಸ ಹೆಚ್ಚಾಗಿ ರಾತ್ರಿಯ ಪಾಳಿಯಲ್ಲೆ ಇರುತ್ತಿತ್ತು. ಲಾಜಿಂಗ್ ಮತ್ತು ರೆಸ್ಟೋರೆಂಟ್ ಎರಡರ ಮೇಲ್ವಿಚಾರಣೆಯನ್ನು ಮಾಡುವ ಜವಾಬ್ದಾರಿಗಳಲ್ಲಿ, ಗಿರಾಕಿಗಳ ಅನುಕೂಲತೆಗಳನ್ನು ನೋಡಿಕೊಳ್ಳುವುದು, ಸಿಬ್ಬಂದಿಯ ಕೆಲಸಗಳನ್ನು ಹಂಚುವುದು, ಸರಕಾರೀ ನಿಯಮಗಳ ಪಾಲನೆ, ಮಾಲಿಕರೊಂದಿಗೆ ವ್ಯವಹರಿಸುವುದು ... ಇವೆಲ್ಲವೂ ಸೇರಿದ್ದವು. ಹಾಗಾಗಿ ನನ್ನ ಕೆಲಸ ಮುಗಿಯುತ್ತಲೇ ಇರಲಿಲ್ಲ.

ಒಂದು ದಿನ ನಾನು ರೆಸ್ಟೋರೆಂಟ್‌ನಲ್ಲಿ ತುಂಬ ಬ್ಯುಸಿಯಾಗಿದ್ದೆ. ಬಳಿಯ ರಾಜ್ಯ ಶಾರ್ಜಾದಿಂದ ಅಲ್ಲಿಯ ಶೇಕ್‌ನ ನಿಕಟ ಸಂಬಂಧಿಕರ ಗುಂಪು ನಮ್ಮ ಹೋಟೆಲಿನಲ್ಲಾದ ಯಾವುದೋ ಸಮಾರಂಭಕ್ಕೆ ಬಂದವರು ನಮ್ಮಲ್ಲೆ ರಾತ್ರಿಯಲ್ಲಿ ಉಳಕೊಂಡು, ಮಾರನೆ ದಿನ ಮರಳುವವರಿದ್ದರು. ಈ ಶಾರ್ಜಾದ ಗುಂಪು ರಾತ್ರಿಯ ಊಟಕ್ಕಾಗಿ ರೆಸ್ಟೋರೆಂಟಿಗೆ ಬಂದಿದ್ದು, ಅವರಿಗೆ ಮಾಡುವ ಉಪಚಾರ ಸರಿಯಾಗುತ್ತಿದೆಯೇ ಎಂದು ಅವರ ಸುತ್ತುಮುತ್ತಲೇ ತಿರುಗುತ್ತಿದ್ದೆ. ಅಷ್ಟರಲ್ಲಿ ಬಾರಿನ ಮೆನೇಜರ್ ಬಂದು ಕೆಳ ದನಿಯಲ್ಲಿ ನನ್ನೊಡನೆ ಹೇಳತೊಡಗಿದ, ‘ಸರ್, ಒಬ್ಬ ಗಿರಾಕಿ ಮೂಗಿನವರೆಗೆ ಕುಡಿದ ಅಮಲಿನಲ್ಲಿ, ಬಾರಿನ ಸಮಯ ಮೀರಿದರೂ ಇನ್ನೂ ಅಲ್ಲಿಂದ ಕದಲದೆ ಇದ್ದಾನೆ. “ನೀವು ಇನ್ನೊಂದು ಪೆಗ್ ಸುರಿಯದಿದ್ದರೆ ನಾನು ಇಲ್ಲಿಂದ ಹೊರಡುವವನಲ್ಲ”ಂತ ಹೇಳ್ತಾ ಇದ್ದಾನೆ. “ನನಗೆ ಬಲರಾಮ್‌ಸಾಬ್ ಅವರದ್ದು ಒಳ್ಳೆ ಪರಿಚಯ. ಇನ್ನೊಂದು ಡ್ರಿಂಕ್ ನನಗೆ ಕೊಡ್ಲಿಕ್ಕೆ ಅವರು ಹಿಂದೆ ಮುಂದೆ ನೋಡುವವರೇ ಅಲ್ಲ, ಅವರನ್ನೇ ಕರಿಯಿರಿ ನೋಡುವ; ಅವರು ಬರುವವರೆಗೆ ನಾನು ಕಾಯುವವನೇ” ಎಂದೆಲ್ಲಾ ಹೇಳಿಕೊಂಡು ಕುಳಿತೇ ಇದ್ದಾನೆ.’ ಎಂದ.

‘ಹೆಸರೇನಂತೆ?’ ಎಂದು ಕೇಳಿದೆ.

‘ಕೃಪಾಲ್ ಸಿಂಘ್- ಅಂತೆ’

‘ನನಗೆ ಯಾವ ಕೃಪಾಲ ಸಿಂಘನೂ ಗೊತ್ತಿಲ್ಲ. ಹಾಗೆ ಹೇಳು .. ನನಗಂತೂ ಈಗ ಅಲ್ಲಿಗೆ ಬರುವುದು ಅಸಾಧ್ಯ... ಈ ಶಾರ್ಜಾ ಜನರ ಉಪಚಾರ ಸರಿಯಾಗದಿದ್ದರೆ ನನ್ನನ್ನು ಇಂಡಿಯಾಕ್ಕೆ ದಬ್ಬಿ ಬಿಟ್ಟಾರು. ಹಾಗಾಗಿ ನಾನು ಇಲ್ಲಿರುವುದು ಅತ್ಯಗತ್ಯ. ನೀವೆಲ್ಲಾ ಒಟ್ಟಾಗಿ, ಅವನಿಗೆ, “ನೀನು ಈಗಲೇ ಹೊರ ಹೋಗದಿದ್ದರೆ ಒಳ್ಳೆಯದಾಗಲಿಕ್ಕಿಲ್ಲ” ಎಂದು ಬೆದರಿಕೆ ಹಾಕಿ. ಹೋಗದೆ ಏನು ಮಾಡಿಯಾನು?’ ಎಂದು ಬಾರ್ ಮೆನೇಜರ್‌ನನ್ನು ಸಾಗ ಹಾಕಿದೆ.

ಆದರೇನು, ಸ್ವಲ್ಪವೇ ಹೊತ್ತಿನಲ್ಲಿ, ಗೋಡೆಗೆ ಹೊಡೆದ ಚೆಂಡು ಅಲ್ಲಿಂದ ಪುಟಿದು ಹಿಂದಕ್ಕೆ ಹಾರಿ ಬರುವಂತೆ, ಅದೇ ಮೆನೇಜರ್ ಅದೇ ಒಸಗೆಯನ್ನು ಸ್ವಲ್ಪ ಬದಲಾಯಿಸಿ ತಂದಿದ್ದ.

‘ಸರ್, ನಾನು ಮತ್ತು ಬಾರ್ ಟೆಂಡರ್ ಸೇರಿ ನೀವು ಹೇಳಿದಂತೆ ಅವನನ್ನು ಬೆದರಿಸಿದೆವು. ಅದು ನಡೆಯಲಿಲ್ಲ ಅವನೇ ನಮ್ಮನ್ನು, “ನೀವು ಇನ್ನೂ ಇದೇ ರೀತಿ ಬೆದರಿಸುತ್ತಾ ಇದ್ದರೆ, ಇಲ್ಲಿ ಇಬ್ಬರ ಹೆಣಗಳು ಬೀಳಲಿವೆ” ಎಂದು ಬೆದರಿಸಿ ಬಿಟ್ಟ. ಈಗ ಅಲ್ಲಿ ಇರುವವರೇ ನಾವಿಬ್ಬರು-ನಾನು ಮತ್ತು ಬಾರ್ ಟೆಂಡರ್. ಅವನಲ್ಲಿ ಪಿಸ್ತೂಲ್ ಇರಬಹುದು, ಸರ್. ನಮ್ಮಿಬ್ಬರನ್ನೂ ಹೊಡೆದು ಹಾಕಿಯಾನು! ಅದಕ್ಕೇ ಎರಡು ಹೆಣಗಳ ಮಾತು ಬಂದಿರಬಹುದು. ನಾವು ಬದುಕಿ ಉಳಿಯುವುದು ಸಂಶಯ,’ ಎಂದ ಬಾರ್ ಮೆನೇಜರ್, ಹೆದರಿಕೆಯಿಂದ ಹೇರಳವಾಗಿ ಸುರಿಯುತ್ತಿದ್ದ ಬೆವರನ್ನು ಒರಸಿ ಕೊಳ್ಳುತ್ತಾ.

‘ನೀವಿಬ್ಬರೇ ಹೇಗೆ? ನಾನು ಹತ್ತು ಘಂಟೆಗೆ ಬಾರಿಗೆ ಬಂದಾಗ ಬಾರಿನ ಬೌನ್ಸರ್ ಆರೋಗ್ಯದಲ್ಲಿದ್ದ. ಈಗ ಏನು ಸತ್ತು ಹೋಗಿದ್ದಾನಾ? ಅವನು ಈ ಗಿರಾಕಿಯ ಕುತ್ತಿಗೆ ಹಿಡಿದು ಹೊರದಬ್ಬಲಿ,’ ಎಂದು ನಾನು ಗದರಿಸಿ ಹೇಳಿದೆ.

‘ಗಿರಾಕಿಯ ಹೆಸರು ಕೃಪಾಲ್ ಸಿಂಘ್, ಸರ್’ ಎಂದು ನೆನಗೆ ನೆನಪಿಸಿದ.

‘ಅದು ಗೊತ್ತು ನನಗೆ ... ಅವನಿಗೆ ಎಂಥಾ ಸಾವಿನ ಹೆಸರೇ ಇರಲಿ, ನನಗೇನಂತೆ?’ ಎಂದೆ

‘ಸರ್, ನಮ್ಮ ಬೌನ್ಸರ್‌ನ ವಿಷಯ ಹೇಳಬೇಕೆಂದರೆ, “ನನ್ನ ಟೈಮು ಮುಗಿಯಿತು” ಎಂದು ಶಿಫ್ಟ್ ಮುಗಿಯುತ್ತಲೇ ಅವನು ಹೋಗಿ ಬಿಟ್ಟ,’ ಎಂಬ ಅಮೂಲ್ಯ ಮಾಹಿತಿಯನ್ನು, ಇದೊಂದು ಶುಭವಾರ್ತೆ ಎನ್ನುವಂತೆ ಬಾರ್-ಮೆನೇಜರ್ ಕೊಟ್ಟ.


ನನಗೆ ಬೌನ್ಸರ್‌ನ ಮೇಲೆ ಎಲ್ಲಿಲ್ಲದ ಸಿಟ್ಟು ಬಂತು. “ನಾಳೆ ಅವನನ್ನು ನೋಡಿಕೊಳ್ಳುತ್ತೇನೆ!” ಎಂದು ನನ್ನನ್ನು ಸಮಾಧಾನ ಮಾಡಿಕೊಂಡೆ.

‘ಹಿಂದೆ ಎರಡು ಬಾರಿ ನಮ್ಮ ಬಾರ್ ಹೀಗೆ ಮುಚ್ಚಲು ತಡವಾದ್ದಕ್ಕೆ ನಮ್ಮ ಲೈಸನ್ಸ್ ರದ್ದು ಮಾಡುವ ಬೆದರಿಕೆ ಸರಕಾರದ ಡಿಪಾರ್ಟ್‌ಮೆಂಟಿನಿಂದ ಬಂದದ್ದು ನೆನೆಪಿದೆಯಲ್ಲ! ನಾವೇನು ಮಾಡುವುದು ಈಗ?’ ಎಂದು ಸವಾಲೆಸದ ಬಾರ್ ಮೆನೇಜರ್, ಜೋತು-ಮುಖ ಮಾಡಿಕೊಂಡು, ತಟಸ್ಥನಾಗಿ ನಿಂತು ಬಿಟ್ಟ.

‘ನೀವಿಬ್ಬರೂ ಅಲ್ಲೇ ಹಾಸಿಗೆ ಹಾಕಿ ನಿದ್ದೆ ಮಾಡಿ! -ಇವರೆಲ್ಲ ಊಟ ಮುಗಿಸಿ ಹೋಗುವವರೆಗೆ ನಾನು ಇಲ್ಲಿಂದ ಕದಲುವವನಲ್ಲ. ಇನ್ನೊಮ್ಮೆ ನಿನ್ನ ಮುಖವನ್ನು ಇಲ್ಲಿ ತೋರಿಸಬೇಡ’ ಎಂದು ಎಲ್ಲರ ಬೆದರಿಕೆಗಳೊಂದಿಗೆ ನನ್ನ ಬೆದರಿಕೆಯನ್ನೂ ಸೇರಿಸಿ, ಬಾರ್ ಮೆನೇಜರನ್ನು ಮರಳಿ ಬಾರಿಗೆ ಅಟ್ಟಿದೆ.


ಆ ಮೇಲೆ ಸ್ವಲ್ಪ ಹೊತ್ತಿನಲ್ಲಿ ನಮ್ಮ ವಿಶೇಷದ ಅಥಿತಿಗಳು ಊಟ ಮುಗಿಸಿ, ಸಂತೃಪ್ತರಾಗಿ ಎದ್ದ ಮೇಲೆ, ಅವರನ್ನು ರೆಸ್ಟೊರಂಟ್‌ನಿಂದ ಬೀಳ್ಕೊಟ್ಟು, ನಾನು ಅವಸರವಸರವಾಗಿ ಬಾರ್‌ನಲ್ಲಿ ಎಷ್ಟು ಹೆಣಗಳು ಬಿದ್ದಿವೆಯೆಂದು ಲೆಕ್ಕ ಮಾಡಲಿಕ್ಕೆ ಹೊರಟೆ.







1. Bhagavadgeete & Haribhaktisara
2. Bhagavadgeete & Karnataka Rajyotsava
3. Bhagavadgeete & Tulasi Sankeertane
4. Talk on Ayurveda by Dr. Prateeksha
5. Sambhashane with Shri B Nagaraja Rao




1. Felicitations to Smt. Vijayalaxmi & Dr. Suresh Rao At Kateel.
2. Birthday Celebration at Ashraya. 3 & 4. Children`s Day Celebrations


Children`s
Day
Celebration

# SHREE GOPALAKRISHNA PRASEEDATU

As ordained by our Almighty Lord,

On the auspicious date of **Thursday, 3rd February 2022 at 8.32 am**, the sacred time derived from the Solar Almanac, the adorable IDOL of our beloved Sri Gopalakrishna will be consecrated with Divine Energy inside the Sanctum Sanctorum of the newly constructed Gokul temple.

On **Sunday, 6th February 2022 Sunday at 9.28 am**, one thousand and eight Silver Pots, sanctified with Vedic Hymns as per scriptural sanctions, will be offered for the Brahma Kalashabhisheka, to propitiate the great Lord, with utmost devotion and religious fervour.

The most pious and very elaborate religious festivities starting from **Saturday 29th January 2022 6.00 pm** onwards to the conclusion, with blessings from Purohiths, on **Monday 7.2.2022**, will be conducted by the very respected Head Priest Brahmashri Muralidhara Tanthry of Edapadavu Thenkumane and his team of specialist Vidvans and Purohiths. They will be performing every event with utmost rigour and devotion to seek benefits of Lord's grace and blessings for each participating devotee and the community at large.

The whole ten-day event of very elaborate auspicious festivities is meant for the devotees, participants, their friends and relatives and whole of the city.

You are most cordially invited to participate and extend your wholehearted co-operation in making this a success. Let each one of us be the proud recipient of the Abundant Grace of **Lord Sri Gopalkrishna.**

**A. S. Rao**
Secretary-Trustee

**Dr. Suresh S. Rao**
President

**A. P. K. Potty**
Hon. Secretary

**Trustees, GOPALAKRISHNA PUBLIC TRUST & Managing Committee, B.S.K.B. Association**

# BRAHMAKALASHOTSAVA

## Schedule of Events

### Saturday, 29th January 2022

**6.00 pm onwards**
**at Gokul**

Devatha Prarthane
Saptashuddhi Rakshoghna Homa
Vastu Bali

Swasti Punyaha Vachana
Vastu Homa, Vastu Pooja
Praakara Bali

**7.45 pm** (Simha Lagna)

Dwarapooja
Pravesha

### Sunday, 30th January 2022

**7.00 am - 9.30 am**
**at Gokul**

Gana Yaga, Satyanarayana Pooja, Prasada

**10.30 am onwards**
**At Ashraya-Balalaya**

Devataa Prarthane
Bimbachara kalasha sahita tatvahoma

Swasti Punyaha Vachana
Mahapooja

**2.30 pm**
Bimba Chalane, Departure to Moolalaya, Gokul

**3.30 pm**
Arrival at Hanuman Temple, Sion

**4.00 pm**
Procession in the presence of holy pontiffs of Udupi Ashtha Mathas, other Mathas & dignitaries along with Horekanike

**5.30 pm**
Arrival at Gokul

**6.00 pm onwards**
Gokul Building inauguration & Aashirvachanas by Udupi Ashtha Matha Swamijis

# BRAHMAKALASHOTSAVA
## Schedule of Events

### Monday, 31st January 2022

**8.00 am onwards**

Devatha Prarthane, Torana Muhurtha, Ugrana Muhurtha
Mahasankalpa, Punyaha Vachana, Arani Mathana
Bhadradeepa Pratishte, Brahmakurcha Homa
Deva Nandi, Kankana Bandha
Ganapathi Atharvasheersha Yaga, Mahapooja

**9.00 am - 1.30 pm**

Bhajans by different bhajana mandalis

**5.00 pm onwards**

Panchakavya melana, Saptashuddhi, Praasaadshuddhi,
Ankurarpane, Astrakalasha Pratishte
Rakshoghna Homa, Vastu Homa, Vastu Pooja
Vastu Bali, Praakaara Bali, Mahapooja

**2.00 pm**

Bhakti Rasamanjari - Vidushis Vidya Tantry, Bharathy Nagaraj, Veena Shastry

**4.00 pm**

Dance Fusion by Priyanjali Rao (Bharatanatyam) and Harshada Jambekar (Kathak)

**5.00 pm**

Kannada Drama "Gumma" by Kala Bharati, Karnataka Sangha, Mumbai Directed by Bharath Kumar Polipu

**6.00 pm**

Felicitations

**7.00 pm**

Sri Ranganatha- The Reclining Lord by Vidwan Pavitra Bhat and Disciples

### Tuesday, 1st February 2022

**8.00 am onwards**

Punyaha Vachana, Gana Yaga,
Poorna Navagraha Shanthi
Ashtakshara Mantra Homa, Mahapooja

**9.00 am - 1.30 pm**

Bhajans by different bhajana mandalis

**5.00 pm onwards**

Durga Namaskara, Astra Mantra Homa
Ankura Pooja, Mahapooja

**2.00 pm**

Bhakti Rasamanjari - Vidushis Chandrika Bhat, Nalini Rao, Vinitha Acharya

**4.00 pm**

'Avala Kagada' A Theatrical piece based on Rabindranath Tagore Stories, Concept & Directed by Dr. Shripad Bhat, Design : Shwetha Hasan, Adaption : Sudha Adhukal. presentation Ahalya Ballal

**5.00 pm**

Kannada Drama "Gubbachi" By Kala Jagattu Mumbai. Directed by Dr.Vijaykumar Shetty Thonse

**6.00 pm**

Felicitations

**7.00 pm**

Vamshika - the dance ensemble on Gopi Geetham by Sahana School of Performing Arts, Vidushi Sahana Bharadwaj

# BRAHMAKALASHOTSAVA
## Schedule of Events

### Wednesday, 2nd February 2022

**8.00 am onwards**
Swasthi Punyaha Vachana, Sanjeevini Mahamrityunjaya Homa, Akshate Homa, Gana Yaga, Bimba Shuddhi, Mahapooja

**9.00 am - 1.30 pm**
Bhajans by different bhajana mandalis

**5.00 pm onwards**
Shakhti Homa, Ratnanyasadi Homa, Chakrabhjamandala Pooja, Go Dohana & Shirasattva Homa, Danyaadivasa Prakriyas, Go Pooja, Adhivasa Homa

**2.00 pm**
Bhakti Rasamanjari - Vidushis Maithili Rao, Manjula Bhat, Vinaya Rao (Veena)

**4.00 pm**
Cultural Programme By Chinnara Bimba

**5.00 pm**
Singing orchestra by Amruta Natu, Gaurav Bangia

**6.00 pm**
Felicitations

**7.00 pm**
Yahshagana : "Krishna Leele- Kamsa Vadhe" by Gokul Members, Direction : Geetha L. Bhat

### Thursday, 3rd February 2022

**6.00 am onwards**
Punyaha Vachana, Ashta Mangala Darshana, Vidyeshadi Kalashabhisheka, Gana Yaga, Shikhara Pratishte

**8.32 am (Kumbha Lagna)**
**Lord Sri Krishna's Bimba Pratishte,**
Ashta Bandha Lepana, Nidrakumbha abhisheka, Nityanaimittika Nirnaya, Shilpi Maryadi, Mahapooja

**9.00 am - 1.30 pm**
Bhajans by different bhajana mandalis

**5.00 pm onwards**
Nagatanu Tarpana, Ankura Pooja, Prasanna Pooja, Mahapooja

**2.00 pm**
Dance Drama, Krishnam Vande Jagadgurum, by Nritya Vidya Nilaya, Bhandup, Guru Vidushi Shailaja Madhusoodan

**4.00 pm**
Musical Drama "Saakaara" By Mysore Association Kalatanda Matunga. Directed by Dr.Manjunath

**5.00 pm**
'Go Kool' Band

**6.00 pm**
Felicitations

**7.00 pm**
Devotional Songs by Sangeeta Vidyanidhi Dr.Vidyabhushan

### Friday, 4th February 2022

**8.00 am onwards**
Punyaha Vachana, Tatva Homa, Tatva Nyasa Pooja, Shikhara Pratishte, Chandika Yaga, Gana Yaga, Tatva Kalashabhisheka, Gopura Samarpane, Kalashaabhishekha, Mahapooja, Prayashchitta Homa

**9.00 am - 1.30 pm**
Bhajans by different bhajana mandalis

**5.00 pm onwards**
Maha Sudarshana Homa, Sanidhya Samyojne, Ankura Pooja, Dikpalaka Homa, Mahapooja

**2.00 pm**
Yaksha Sangeeta-Nrutya-Samvada (Rasa bharita Yaksha Bhojana) by Gokul Members & Dasaru kanda Krishna by Vidushi Dr. Shyamala Prakash

**5.00 pm onwards**
Srinivasa Kalyanotsava

# BRAHMAKALASHOTSAVA
## Schedule of Events

### Saturday, 5th February 2022

**8.00 am onwards**
Punyaha Vachana
Sri Krishna Mantra Homa
Shantiprayashchitta Homa
Gana Yaga
Mantapa Namaskara
Mahapooja

**9.00 am - 1.30 pm**
Bhajans by different bhajana mandalis

**5.00 pm onwards**
Mandala Pooja,
Pancha Vimshathidravyamelita sahasra parikalasha sahita
Brahmakalashadi adhivasa Homa
Ankura Pooja
Mahapooja

**2.00 pm onwards**
**"Devi Mahtme" Yakshagana**
by Kateelu mela

### Sunday, 6th February 2022

**7.00 am onwards**
Punyaha Vachana, Gana Yaga

**9.28 am (Meena Lagna)**
**Sahasra kalashasahita**
**(1008) Brahmakalshaabhisheka** Mahapooja,
Palla Pooja, Anna Santarpane

**11.00 am onwards**
**Swarna-Rajata Tulabhara to**
**H. H. Sri Sri Vidyadheesha Teertha Swamiji**
**of Udupi Palimaru Matha along**
**with his Pattada Devaru Sri Kodandarama**

**5.00 pm onwards**
**— At Gokul —**
Shadadvanyasa Pooja, Ranga Pooja,
Devara Bali Utsava

**10.00 am**
Bhakti Rasamanjari by - Yuva Kalavrunda
& Vidwan Pawan Rao

**5.00 pm**
**— At Shanmukhanand Hall —**
**"Krishna"** Ballet by **Sonia Parchure,**
a celebrated dancer and choreographer

**6.00 pm**
Felicitations

**7.00 pm onwards**
**Ultimate melodies of Madan Mohan**
Music coordinator : **Avinash Chandrachud**
with a live orchestra of **25 musicians.**
Singers :
**Hrishikesh Ranade, Anand Sawant, Sonali Karnik,**
**Advaita Lonkar - Pethe & Sharayu Date**
Compere : **Ambarish Mishra.**

### Monday, 7th February 2022

**8.00 am**
Punyaha Vachana
Mangala Gana Yaga
Samprokshane
Mahapooja
Maha mantrakshate

With Best Compliments From

A
Well
Wisher

ಹೋಗುತ್ತ, ಮಧ್ಯಾಹ್ನ ಹೊತ್ತಿಗೆ ನಮ್ಮ ಲಾಜಿಂಗ್‌ನ ರೌಂಡ್ ತೆಗೆದುಕೊಳ್ಳುತ್ತಿದ್ದಾಗ, ಮೆಟ್ಟಲು ಇಳಿಯುತ್ತಿದ್ದ ಒಂದು ವ್ಯಕ್ತಿ ನನ್ನನ್ನು ದೂರದಲ್ಲೇ ನೋಡಿ, ನನ್ನತ್ತ ಕತ್ತು ತಿರುಗಿಸಿದ್ದು ನೆನಪಾಯಿತು. ದೊಡ್ಡ ಆಳು, ಅಗಲವಾದ ಕಡು ಮೇಘವರ್ಣದ ಮುಖದಲ್ಲಿ ದೊಡ್ಡ ಮೀಸೆ, ನನ್ನನ್ನು ನೋಡಿ ನಕ್ಕಾಗ ಬಾಯಿ ತುಂಬ ದೊಡ್ಡ ಸೈಸಿನ ಹಲ್ಲುಗಳ ನಸು ಕೆಂಪು ಬಣ್ಣ-ಈ ಎಲ್ಲದರಿಂದ ಭೂಷಿತನಾದ ಆ ವ್ಯಕ್ತಿ, ನನ್ನ ದರ್ಶನದಿಂದ ಅತೀವ ಆನಂದ ಆದವರಂತೆ ದೊಡ್ಡ ಸ್ವರದಲ್ಲಿ, 'ಸಾಬ್, ನಾನು ಇಲ್ಲೇ ಉಳಕೊಂಡಿದ್ದೇನೆ, ಮತ್ತೆ ನಿಮಗೆ ಸಿಕ್ಕುತ್ತೇನೆ,' ಎಂದು ಹೇಳಿದಾಗ, ಯಾರಪ್ಪ ಈ ಆಸಾಮಿ?-ಎಂಬಂತಾಗಿತ್ತು. ಈಗ ಮಾತ್ರ, ಅ 'ಆಸಾಮಿ'ಯೂ, ಬಾರಿನಲ್ಲಿ ಕೂತುಕೊಂಡು ಬಾರ್ ಮೆನೇಜರ್‌ನ ಜೀವ ಹಿಂಡುತ್ತಿರುವ ಈ 'ಆಸಾಮಿ'ಯೂ ಒಬ್ಬನೇ ಇರಬಹುದೇ ಎಂಬ ಸಂಶಯ ನನ್ನ ಮನಸ್ಸಿನಲ್ಲಿ ಮೂಡಿತು.

ಬಾರಿಗೆ ಹೋಗಿ ಮುಟ್ಟಿದಾಗ ಅಲ್ಲಿ ಲೈಟುಗಳು ನಂದಿದ್ದು, ಕತ್ತಲೆ ಮುಸುಕಿತ್ತು. ಒಳಗೆ ನಿಶ್ಶಬ್ಧ ನೀರವ ವಾತಾವರಣ-ಬಾರ್ ಮೆನೇಜರ್, ಬಾರ್ ಟೆಂಡರ್, ಹಾಗೂ 'ಮದ್ಯಾಗ್ರಹ' ಮಾಡುತ್ತಿದ್ದ ಗಿರಾಕಿ ಸಕಲರೂ ಅವರವರ ಮನೆಗೆ ಹೋಗಿ, ಸ್ವಗೃಹದಲ್ಲಿ ಸುಖ ನಿದ್ರೆ ಮಾಡುತ್ತಿದ್ದಿರಬಹುದಾದ ಲಕ್ಷಣಗಳು ಕಂಡು ಬಂದವು. ಆದರೆ ಬಾರ್ ಮೇಲಿನ ಒಂದು ಕ್ಷೀಣವಾದ ಲೈಟ್ ಉರಿಯುತ್ತಿದ್ದದ್ದು ಕಣ್ಣಿಗೆ ಬಿದ್ದು, ನಾನು ಅತ್ತ ಸರಿದೆ. ಸಮೀಪಿಸುತ್ತ, ಕತ್ತಲೆಯಲ್ಲಿ ಕಣ್ಣೆಟ್ಟು ಪರೀಕ್ಷಿಸಿ ನೋಡಿದಾಗ, ಈಗಷ್ಟೆ ದಾಖಲಾಗಿಸಿದ ಮೂರು ಹೆಸರುಗಳನ್ನು ಹೊತ್ತ, ಮೂರು ಜನರೂ ಬಾರ್ ಮೇಜಿನ ಅತ್ತ-ಇತ್ತ ಹೈಸ್ಟೂಲುಗಳ ಮೇಲೆ ಎದುರುಬದುರಾಗಿ ಕೂತು ಕೊಂಡಿರುವುದು ನನ್ನ ಅವಗಾಹನೆಗೆ ಬಂತು. ಇನ್ನೂ ಹತ್ತಿರಕ್ಕೆ ಹೋದಾಗ, ಮೂವರು ಪಿಸು ಮಾತನಾಡುತ್ತ, ಮೆಲುನಗುತ್ತ, ಒಬ್ಬರಿಗೊಬ್ಬರು ಶ್ಶ್! ಎಂದು ಸುಮ್ಮನಿರಲು ಸೂಚನೆ ಕೊಡುತ್ತಿರುವುದು ಕಂಡು ಬಂತು.

ಹಿಂದಿನ ಕಾಲದ ನಾಟಕ-ಸಿನೆಮಾಗಳಲ್ಲಿ ಮುಖ್ಯ ಪಾತ್ರಧಾರಿಗಳು, ಕಡೆಯ ದೃಶ್ಯದಲ್ಲಿ, ಸಾಲಾಗಿ ನಿಂತು, ಒಬ್ಬರನ್ನೊಬ್ಬರು ನೋಡುತ್ತ, ನಗುತ್ತ, ತಾವೀಗ ಎಲ್ಲಾ ಕಷ್ಟಗಳನ್ನು ಸಾಂಗತವಾಗಿ ದಾಟಿ, ಸಂತೊಷದಲ್ಲಿದ್ದೇವೆಂದು ಸಭಿಕರಿಗೆ ಮನದಟ್ಟು ಮಾಡುವ ಕ್ರಮವಿತ್ತು. ಈಗ, ಮೇಲ್ಕಾಣಿಸಿದ ಮೂವರೂ, ತಮ್ಮೊಳಗೆ ಹಿಂದೆ ಉಲ್ಬಣಿಸಿದ ಕಲಹಗಳು ಕೊನೆಗೊಂಡು, ಇಲ್ಲೊಂದು ಸೌಹಾರ್ದ ವಾತಾವರಣ ನೆಲಸಿ, ಎಲ್ಲವೂ ಸರಿ ಹೋಗಿದೆ-ಎಂದು ತಮಗೇ ಧೃಢಪಡಿಸಿಕೊಳ್ಳುವಂತೆ, ಹೈಸ್ಟೂಲುಗಳಲ್ಲಿ ಕೂತು, ಸಂತೋಷ ಪಡುತ್ತಿದ್ದರು. ಆದರೆ, ಇನ್ನೂ ಹತ್ತಿರಕ್ಕೆ ಹೋದಾಗ, ಅವರ ಎದುರಲ್ಲಿ ಮೂರು ಗ್ಲಾಸುಗಳು ಕಾಣ ಬಂದು, ಅವರೊಳಗೆ ಒಂದು ರೀತಿಯ ಒಪ್ಪಂದವೂ ಆಗಿದ್ದು, ಮೂವರೂ ಕಂಠ ಪೂರ್ತಿ ಕುಡಿದು ಸಂತುಷ್ಟರಾಗಿದ್ದಾರೆಂದು ನನಗೆ ಅನಿಸಿ, ನಾನು ಕಂಡ ಸೌಹಾರ್ದ ಹಾಗೂ ಸಂತೋಷಮಯವಾದ ಸನ್ನಿವೇಶಕ್ಕೆ ಇದೇ ಮುಖ್ಯ ಕಾರಣವಾಗಿರಬಹುದೆಂಬ ಅಭಿಪ್ರಾಯವನ್ನು ತಾಳುವ ಹಾಗಾಯ್ತು.

ಬಾರ್ ಮೆನೇಜರನಿಗೆ ನನ್ನಿಂದ ಯಾವ ಸಲಹೆಯೂ ಸಿಗದೆ ಹೋದದ್ದರಿಂದ, ತನ್ನ ಪ್ರಾಣಕ್ಕೆ ಬಂದ ಅಪಾಯವನ್ನು ಗಮನದಲ್ಲಿರಿಸಿಕೊಂಡು, ಲೈಟ್‌ಗಳನ್ನು ನಂದಿಸಿ, ಹೊರಗಿನಿಂದ ಬಾರ್ ಮುಚ್ಚಿದಂತೆ ಕಾಣುವ ಹಾಗೆ ಮಾಡಿ, ಹಟ ಹಿಡಿದು ಕುಳಿತ ಕೃಪಾಲ್ ಸಿಂಘನಿಗೆ ಇನ್ನೊಂದು, ಮತ್ತೊಂದು, ಮಗದೊಂದು ಎಂಬಂತೆ ಪೆಗ್‌ಗಳನ್ನು ಸುರಿಯುತ್ತ ಹೋಗಿ, ಅವನೂ, ಬಾರ್ಟೆಂಡರ್ ಇಬ್ಬರೂ ಸೇರಿ ಶಾಂತಿ ಸ್ಥಾಪನೆ ಮಾಡಿಕೊಂಡಿರಬಹುದು ಎಂದು ಊಹಿಸಿದೆ. ಗಿರಾಕಿಯಾದರೂ, ಸುರಿದ ಸುರೆಯನ್ನು ಸರಾಗವಾಗಿ ಕುಡಿಯುತ್ತ ಹೋದಾಗ, ಹಾಗೆ ಏಕಾಕಿಯಾಗಿ ಕುಳಿತು ಕುಡಿಯುವುದರಲ್ಲಿ ಬೇಸರವೆನಿಸಿ, ಉಳಿದಿಬ್ಬರನ್ನು ಪುಸಲಾಯಿಸಿ, ತನ್ನ ಖರ್ಚಿನಲ್ಲಿ ಕುಡಿಸುತ್ತ ಕುಳ್ಳಿರಿಸಿರಬೇಕು. ಅಲ್ಲಿ ಯಾರಿಗೂ ನಾನು ಬರಬಹುದೆಂಬ ನಿರೀಕ್ಷೆ ಇದ್ದ ಹಾಗೆ ಇರಲಿಲ್ಲ. ಹಾಗಾಗಿ ಕತ್ತಲನ್ನು ಭೇದಿಸಿ, ನಾನು ಹತ್ತಿರ ಬಂದು ನಿಂತು, 'ಇಲ್ಲಿ ಏನಾಗುತ್ತಿದೆ?' ಎಂಬ ತೀರ ಸಾಮಾನ್ಯವಾದ ಪ್ರಶ್ನೆ ಹಾಕಿದಾಗ, ಬಾರ್ ಮೆನೇಜರ್ ಮತ್ತು ಬಾರ್ಟೆಂಡರ್ ಇಬ್ಬರೂ ಕಂಗಾಲಾಗಿ, ಒಟ್ಟಿಗೆ ಸೆಟೆದು ನಿಂತರು.

ಕೃಪಾಲ್‌ಸಿಂಘ್ ನನ್ನನ್ನು ಅಮಲೇರಿದ ಕಣ್ಣುಗಳಿಂದ ನೋಡಿ-'ಆನಂದ ತುಂದಿಲ' ಎನ್ನುತ್ತಾರಲ್ಲ - ಹಾಗೆ ಆಗಿ, ಕೂತಲ್ಲೇ ನನ್ನನ್ನು ತಬ್ಬಿ ಹಿಡಿದು, ನನ್ನನ್ನು ಒಂದು ಕಂಭವೆಂಬಂತೆ ಆಧರಿಸಿಕೊಳ್ಳುತ್ತಾ, ಜೋಲಾಡುತ್ತ, ಎದ್ದು ನಿಂತು,

ಸಮತೋಲನವಿಲ್ಲದ ಅವನಿಗೆ ಆಧಾರ ಒದಗಿಸಿದ ನನ್ನನ್ನೂ ಕೂಡಾ ಜೋಲಾಡಿಸಿಕೊಂಡು, 'ಸಾಬ್, ನಾನು ಕಾಲಾಸಿಂಘ್' ನೆನಪಾಯ್ತಲ್ಲವೆ?' ಎಂದು ತನ್ನ ಮುಖವನ್ನು ನನ್ನ ಮುಖದ ಸಮೀಪಕ್ಕೆ ತಂದು, ಸುರಾಪಾನದ ಭಯಂಕರ ವಾಸನೆಯನ್ನು ನನ್ನ ಕಡೆ ತೂರುತ್ತ ಕೇಳಿದ.

ಅಷ್ಟು ದೊಡ್ಡ ಜೀವ, ತಾನೂ ಜೋಲಾಡುತ್ತ, ನನ್ನನ್ನೂ ಜೋಲಾಡಿಸುತ್ತಿರುವಾಗ, ಇಬ್ಬರೂ ಯಾವಾಗ ಧರೆಗುರುಳಬಹುದೆಂದು ಹೇಳುವ ಹಾಗಿರಲಿಲ್ಲ. ಆದರೆ ನನ್ನ ಆ ಅತ್ಯಂತ ಅಸ್ಥಿರವಾದ ಸ್ಥಿತಿಯಲ್ಲೂ, ಕಾಲಾ ಎಂಬ ಹೆಸರು ಕಿವಿಗೆ ಬೀಳುತ್ತಲೇ, ಒಂದಷ್ಟು ನೆನಪುಗಳು ಬಂದೆರಗಿದವು.

ಕಷ್ಟಪಟ್ಟು ಕೃಪಾಲ್ ಸಿಂಘ್ ಯಾನೆ ಕಾಲಾನನ್ನು ಅವನ ಯಥಾ ಸ್ಥಾನದಲ್ಲಿ ಕುಳ್ಳಿರಿಸಿ, 'ಈಗ ನನ್ನನ್ನು ನೋಡಿದ್ದಾಯಿತು, ಬೇಕಷ್ಟು ಕುಡಿದದ್ದಾಯಿತು, ಇನ್ನೂ ಇಲ್ಲಿ ನಾವೆಲ್ಲ ಕೂತಿದ್ದರೆ ಎಲ್ಲರೂ ಜೈಲಿಗೆ ಹೋಗುವ ವ್ಯಾಪಾರ. ಬಾರನ್ನು ಯಾವಾಗಲೋ ಮುಚ್ಚ ಬೇಕಿತ್ತು. ಇನ್ನು ನೀನು ಮನೆಗೆ ಹೋದರೆ ಸರಿಯಾಗುತ್ತದೆ, ಹೊರಡು!' ಎಂದು ಅವನನ್ನು ಹುರಿದುಂಬಿಸಿದೆ.

ಕಾಲಾ ಎಂದ, 'ಸಾಬ್, ಜೈಲಿಗೆ ಯಾಕಷ್ಟು ಹೆದರುತ್ತೀರಿ? ಇಲ್ಲಿಯ ಜೈಲಿನ ಗಮ್ಮತ್ತು ಅಲ್ಲಿ ಕೆಲವು ತಿಂಗಳು ಇದ್ದರೇನೇ ತಿಳಿದೀತು' ಎಂದು, ಹೇರಳ ಹಿಕ್-ಹಿಕ್ ಗಳ ಮಧ್ಯೆ ತೊದಲಿಕೊಂಡು ಹೇಳಿದ.

'ಆಯ್ತು! ಯಾವಾಗಲಾದರೊಮ್ಮೆ ಒಟ್ಟಿಗೆ ಹೋಗಿ ಅಲ್ಲಿಯ ಗಮ್ಮತ್ತನ್ನು ಅನುಭವಿಸೋಣ. ಆದರೆ, ಸದ್ಯಕ್ಕೆ ಮಾತ್ರ ನಿನ್ನ ಮನೆಗೆ ಹೋಗಿ, ಸುಖವಾಗಿರು,' ಎಂದು ಅವನನ್ನು ಆಶೀರ್ವದಿಸಿ, ಎಲ್ಲರನ್ನೂ ಅವರವರ ಮನೆಗಳಿಗೆ ಅಟ್ಟಿ, ನನ್ನ ರೂಮಿಗೆ ಹೋದೆ.

ಕಾಲಾನ ನೆನಪು ಬರದಿರಲು ಸಾಧ್ಯವೇ ಇರಲಿಲ್ಲ. ಇದೀಗ ಅವನನ್ನು ನಾನು ಮೂರನೆ ಬಾರಿಗೆ ಸಂಧಿಸುವುದಾಗಿದೆ. ಮೊದಲ ಬಾರಿಗೆ ಸಂಧಿಸಿದ್ದು ಸಾಧಾರಣ ಆರೇಳು ವರ್ಷಗಳ ಹಿಂದೆ. ಆಗ ಮಾತ್ರ ಕಾಲಾ ಈಗಿನಂತೆ ದಪ್ಪವಿರಲಿಲ್ಲ- ಉದ್ದವಾಗಿದ್ದು, ಕಟ್ಟು ಮಸ್ತಾದ ದೇಹ, ದಪ್ಪ ಮೀಸೆ, ದೊಡ್ಡ ಉಬ್ಬು ಕಣ್ಣುಗಳು, ಹುಲುಸಾದ ಹುಬ್ಬುಗಳು, ಇವೇ ಕಾಲಾನ ಆಗಿನ ರೂಪರೇಷೆಗಳಾಗಿದ್ದವು. ಅವನನ್ನು ನೋಡಿದ ಕೂಡಲೆ ಯಾಕೋ ನನಗೆ ಥಟ್ಟನೆ ಚಂಬಲ್ ಕಣಿವೆಯ ಢಕಾಯಿತರ ನೆನಪಾಗಿತ್ತು. ಇರಲಿ. ನಮ್ಮ ಹೋಟೇಲಿನ ಮಾಲಿಕ, 'ಈ ಮನುಷ್ಯನ ಹೆಸರು ಕೃಪಾಲ್ ಸಿಂಘ್ ಅಂತೆ. ನಮ್ಮ ಬಾರಿನ ಬೌನ್ಸರ್ ಕೆಲಸಕ್ಕೆ ಯೋಗ್ಯನಾಗಿದ್ದಾನೆಂದು ನನಗೆ ಕಂಡಿದೆ, ನೋಡು,' ಎಂದು ಫೋನಿನಲ್ಲಿ ಘೋಷಿಸಿ, ಅವನನ್ನು ನನ್ನಲ್ಲಿ ಕಳಿಸಿದ್ದ.

ನಮ್ಮ ಬಾರಿಗೆ ಬರುವವರಲ್ಲಿ ಒಂದಂಶ ಜನಗಳು ಯಾವಾಗಲೂ ಕುಡಿದು ತೊಂದರೆ ಕೊಡುವ ಘಟಿಂಗರು. ಅವರನ್ನು ಸಂಭಾಳಿಸಲು ಬಲಾಢ್ಯರ ಅಗತ್ಯವಿದ್ದೇ ಇರುತ್ತಿತ್ತು. ನಮ್ಮಲ್ಲಿ ಆ ಹೊತ್ತಿಗಿದ್ದ ಬೌನ್ಸರ್ ಫಸಲ್‌ನ ಕೆಲಸ ಅಷ್ಟೇನು ಪರಿಣಾಮಕಾರಿಯಾಗಿದ್ದಿರಲಿಲ್ಲ. ಕಾರಣ ಅವನ ಬಲಾಢ್ಯತೆಯನ್ನು ಅಲ್ಲಗೆಳೆಯುವ ಅತೀವ ಸೌಜನ್ಯತೆ. ಈ ಬೌನ್ಸರ್ ಕೆಲಸಕ್ಕೆ ಸಂಭಾವಿತರು ಯೋಗ್ಯರಾಗಿರುವುದಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. ಯಾವುದೋ ನೀತಿ ಕತೆಯಲ್ಲಿ ಹೇಳಿದಂತೆ 'ತುಂಡರಿಗೆ ತುಂಡನಾಗಿರ'ಬೇಕಾಗುತ್ತದೆ. ಹಾಗಾಗಿ, ಸೌಜನ್ಯಶೀಲನಾಗಿದ್ದ ಬೌನ್ಸರ್ ಫಸಲ್‌ನ ಬದಲಿಗೆ ಒಬ್ಬ 'ತುಂಡ'ನನ್ನು ನೇಮಿಸುವುದು ಅಗತ್ಯವಿದೆ ಎಂಬುದು ನಮಗೆ ಅರಿವಾಗುತ್ತಲೇ, ಕೃಪಾಲ್ ಸಿಂಘ್‌ನು ನಮ್ಮ ಅಗತ್ಯತೆಗೆ ಓಗೊಟ್ಟಂತೆ ಪ್ರತ್ಯಕ್ಷನಾಗಿದ್ದ. ಅವನ ದೀರ್ಘಕಾಯ, ದಪ್ಪಮೀಸೆ, ಕಟ್ಟುಮಸ್ತಾದ ದೇಹ, ಢಕಾಯಿತರನ್ನು ಹೋಲುವ ಮುಖ ಲಕ್ಷಣಗಳು ಇವೆಲ್ಲದರಿಂದಾಗಿ, ಬೌನ್ಸರ್ ಕೆಲಸಕ್ಕಾಗಿಯೇ ಬ್ರಹ್ಮ ಹುಟ್ಟಿಸಿರಬೇಕು ಎಂದು ಭ್ರಮೆ ಪಡುವಂತೆ ಅವನಿದ್ದುದಂತೂ ಹೌದು.

*(ಮುಂದುವರಿಯುವುದು)*

# Youth Wing Activities for the month of November 2021

✍ **Tanvi Rao**

Hello everyone !! By the grace of Lord Krishna, hope everyone is in sound health. We, the BSKB Association YouthWing, are happy to announce that the Youtube channel has crossed 1000 subscribers. We are extremely grateful for your support and would like to thank all our subscribers and audience. Since the month of June 2020, we are conducting various sessions for you all and we hope to continue and keep you entertained.

The month of November began with A Talk on Ayurveda by Dr. Prateeksha Rao on 7th of November, where the audience got to know more about the benefits of this ancient form of medicine. On the occasion of deepavali and tulasi pooja (11th November), the Ladies Wing and bhajana mandalis presented Bhagawad Geete's Vishwaroopa Darshana by Smt. Usha Chadaga and Smt. Veena Rao. The program also included Tulasi sankeerthana by Gokula and Zonal Bhajana Mandalis. Moving ahead, on 21st November, Arpita Rao who is a clinical nutritionist gave a Talk on Nutrition, Health and Wellness which included a lot of tips and tricks to maintain and look after our health in a much simpler way. On the auspicious occasion of Sri Kanakadasa Jayanthi (25th November), the Ladies Wing and Bhajana Mandalis presented Bhagavad Geete's Bhakti Yoga by Smt. Shylini Rao and Smt. Anasuya Bhat. The Gokula Bhajana Mandali along with Zonal bhajana mandalis, presented Sri Kanakadasa Virachita Haribhakti Saara which was well appreciated by the audience. The last program for the month of November was the 13th episode of Sambhashana where Shri B. Nagaraja Rao (Director of ARROW Electricals India Pvt Ltd) was interviewed by our youth winger Pranav Udupa. The beautiful journey of Shri B Nagaraja Rao, will definitely stand as an inspiration to the upcoming electrical engineers and entrepreneurs.

Here comes the most special event that is held every year in the month of November - Children's Day. On 14th November, the BSKB Association Youthwing celebrated Children's Day virtually where 42 children participated with a lot of interest and enthusiasm. The events were divided into two sessions which were streamed live on our youtube channel. Youthwing Chairman Shri Haridas Bhat inaugurated the day's event, after which Navya Rao carried forward the morning session that included various events like Fancy Dress, Rhyme Time, Shloka Recitation, Bhagavad Gita Recitation. Other events like Let's go to the zoo, Drawing Competition, Spellathon, Creative Writing and Quiz prelims were held in the background in various breakout rooms. The afternoon sessions commenced with Quiz finals after which Manasvi Bharadwaj carried out the Entertainment Program. Our Vice President Shri Vaman Holla boosted the confidence of all the participants through his words of wisdom. Shri Prashant Herle carried out the announcement of the prizes. All participants and winners received their prizes in the

form of Amazon Gift Vouchers. We would like to thank all the participants, parents, judges, volunteers and the audience for making this special event a successful one.

The beauty of conducting online events and performances is that they can be enjoyed anytime, anywhere and at our convenience, re- living those moments once again. So do checkout the BSKBA Youthwing channel on youtube and also do subscribe to stay tuned on future events and performances: https://www.youtube.com/c/BSKBAYouthWing

We are still looking to publish videos of our members or their children showcasing their talents on our Youtube Channel under the Talent Hunt Series, We also look forward to anyone who would like to conduct a workshop or perform live for the Sunday Sessions, feel free to contact any of us regarding the same :

| | | |
|---|---|---|
| Shrilakshmi Udupa | : | 9619472414 |
| Guruprasad Bhat | : | 8451870390 |
| Thanvi Rao | : | 9757215090 |
| Priyanjali Rao | : | 9820830219 |

Lastly, we would also like you to follow our Instagram page youthwing_bskba. Thank you. ✦

# OBITUARY

**The BSKB Association is sad to announce the demise of the following persons. May their soul rest in eternal peace.**



- **Smt. Devi B.**
  Ashraya resident on 14.11.2021.



- **Smt. Satyavathi A.**
  Temporary resident of Ashraya on 17.11.2021.



- **Smt. Satyabhama N.**
  W/o, Shri Balakrishna Niduvannaya, Dahisar on 19.11.2021



- **Shri. Nagesh Rao**
  H/o. Smt. Prema Rao on 26.11.2021.

# Winners of Children's Day Competition

| Event | Group | Prize | Name of participant |
|---|---|---|---|
| Fancy Dress | A | 1st | Parth P. Rao |
| | | 2nd | Shiven Rao |
| | | 3rd | Adhvita M. Rao |
| | B | Consolation Prize | Shrinika R. Bhat |
| | C | 1st | Ananthashakti Rao |
| | | 2nd | Tanmay Palinje |
| | | | Pranav S. Udupa |
| | | 3rd | Tejas Cukkemane |
| | | | Reyansh P. Rao |
| | D | 1st | Anarghya Karanth |
| | | 2nd | Atharva Bhat |
| | | 3rd | Kushank Cukkemane |
| | | | P. Sankalp Rao |
| Let's Go to Zoo | B | Consolation prize | Shrinika R. Bhat |
| Rhyme Time | C | 1st | Reyansh P. Rao |
| | | 2nd | Pranav S. Udupa |
| | | 3rd | Ananthashakti Rao |
| Drawing Competition | C | 1st | Reyansh P. Rao |
| | | 2nd | Ananthashakti Rao |
| | | 3rd | Tanmay Palinje |
| | D | 1st | Sambhrama Mayya |
| | | 2nd | Vaishnav Udupa |
| | | 3rd | Prisha Sharma |
| | E | 1st | Anvita Bhat |
| | | 2nd | Indu Rao |
| | | 3rd | Divij Rao |

| | | | |
|---|---|---|---|
| **Shloka Recitation** | D | 1st | Avyay Rao |
| | | 2nd | Sambhrama Mayya |
| | | 3rd | Atharva Bhat |
| | E | 1st | Kavya Karanth |
| | | 2nd | Anvita Bhat |
| | | 3rd | Divij Rao |
| **Spellathon** | E | 1st | Kavya Karanth |
| | | 2nd | Anvita Bhat |
| | | 3rd | Divij Rao |
| | F | 1st | Siddhant Udupa |
| | | 2nd | Harshini Cukkemane |
| | | 3rd | Sharanya Udupa |
| **Bhagwadgeeta Recitation** | F | Consolation prize | Anushree Bangalore |
| | G | 1st | Advita Bhat |
| | | 2nd | Aditya Nirvaneshwar |
| **Creative Writing** | G | 1st | Advita Bhat |
| | | 2nd | Shreya K. S. Rao |
| | | 3rd | Shrikar Rao |
| **Quiz Competition** | F & G | 1st | Siddhanth Udupa |
| | | | Advita Bhat |
| | | | Sharanya Udupa |
| | | 2nd | Aditya Nirvaneshwar |
| | | | Shrinidhi Rao |
| | | | Ojas Samaga |

Judges : Sahana Bharadwaj, Srilaxmi Herle, Shalini Udupa, Chitra Melmane
Vani Upadhyaya , Nagaratna Holla

# The Soulmate

✍ **Vijeyalakshmi Suresh Rao**



To care for those who once cared for us is one of the highest honors. Our very own Shri J. V. Rao and Shobha have earned this good destiny of serving their 104 year old father... Respected Shri Mohan Rao. They say **'The reward of doing one duty lovingly gives the power to do another'.**

Shri J. V. Rao, member of our Gokul family, completed B.Tech. from IIT, Delhi in 1978 and worked in Larsen and Toubro Limited. Now, he is retired happily and is chasing his hobbies - various NGOs, travel and family/friends.

We are a witness to the manner in which this couple juggle to tend to their father in Chennai and take care of their children and the ongoing visitors quite a few westerners often visiting them in Mumbai. Shri Rao and Shobha are certainly a role model in today's times for us to emulate their deeds.

Below is a write up by Shri Rao on his 104 young adorable dad Shri Mohan Rao

My father, Shri M. Mohan Rao, was born on 11th October 1917, in a large family based in Hejmadi village of Udupi District in Karnataka. After completing his Bachelor of Arts from St. Thomas college, Trissur, Kerala in 1937 he did some odd jobs in Kerala and Madras before joining the Army in 1943, as a Junior Commissioned Officer. Despite being more than a century old, he continues to serve as an inspiration to me and all his friends with his love-all attitude, resilience against hardships, and self-contentment.

Family life was not very smooth for him. He married Savithri, my mother, in 1945. My mother was constantly sick. Moreover, two of his three children were blind almost from a very young age. After intermittent illness, my mother passed away in 1964. Throughout this time, my father faced all the difficulties bravely. Even though his army duty took him to various places, he arranged the best care that he could afford for us. My earliest memories of him are of him lightening up distressing situations with his positive and charming attitude. With that, he cheered up all of us! He always encouraged us to study well, and pray regularly. Looking back, I am in awe of his ability to endure hardship without any complaint or criticism of his fate.

He told us that any amount of goodness that he did is of no use unless he did his basic duty properly. And the basic duty included, first, caring for his family and next, being true to his employer. Even with limited resources, he took excellent care of me and my brothers. Every year, he took two months of vacation to spend time with us, his old parents, and his siblings. He always showed respect and undivided attention to his parents and siblings. But most importantly, he leads by example.

